# ಕರ್ನಾಟಕ ವಿಧಾನ ಪರಿಷತ್ತು

## ಮಂಗಳವಾರ, ದಿನಾಂಕ 20–03–2012 ರಂದು

## ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

## ಮಧ್ಯಾಹ್ನ 12 ಗಂಟೆ 12 ನಿಮಿಷಕ್ಕೆ ಸಮಾವೇಶಗೊಂಡಿತು.

**ಸಭಾಪತಿ (ಶ್ರೀ ಡಿ. ಹೆಚ್. ಶಂಕರಮೂರ್ತಿ) ಅವರು**

**ಪೀಠದಲ್ಲಿ ಉಪಸ್ಥಿತರಿದ್ದರು.**

**"ವಂದೇ ಮಾತರಂ ಗೀತೆಯೊಂದಿಗೆ ಸದನವು ಪ್ರಾರಂಭವಾಯಿತು"**

# 1. ಪ್ರಕಟಣೆ

## ಶಾಸಕರ ಭವನದಿಂದ ವಿಧಾನಸೌಧಕ್ಕೆ 'ಪರಿಸರ ಸ್ನೇಹಿ' ಬ್ಯಾಟರಿಚಾಲಿತ ವಾಹನಗಳ ಸೇವೆ ಒದಗಿಸಿರುವ ಕುರಿತು

**ಸಭಾಪತಿಯವರು:–** ಮಾನ್ಯ ಸದಸ್ಯರಿಗೆ ಒಂದು ವಿಚಾರವನ್ನು ಬುಲೆಟಿನ್ ಮೂಲಕ ತಿಳಿಸಿದ್ದೆವು. ಆದರೂ ಕೆಲವರಿಗೆ ಈ ಸುದ್ದಿ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಕಳೆದ ಬಾರಿ ಅಂದರೆ ಎರಡು ಅಧಿವೇಶನದ ಹಿಂದೆ ನಮ್ಮ ಶಾಸಕರಿಗೆ ಶಾಸಕರ ಭವನದಿಂದ ವಿಧಾನಸೌಧಕ್ಕೆ, ಮಲ್ಟಿಸ್ಟೋರಿಡ್ ಬಿಲ್ಡಿಂಗ್‌ಗೆ, ವಿಕಾಸಸೌಧಕ್ಕೆ ಹೋಗಿ ಬರುವುದಕ್ಕೆ ಪ್ರಾಯೋಗಿಕವಾಗಿ ಬ್ಯಾಟರಿ ಚಾಲಿತ ವಾಹನವನ್ನು ಓಡಿಸಲಾಗಿತ್ತು. ಇಲ್ಲಿ ಕಾರುಗಳ ಸಂಖ್ಯೆ ಕಡಿಮೆ ಆಗಬೇಕು ಮತ್ತು ಶಾಸಕರಿಗೆ ಇಲ್ಲಿ ಬಂದು ಹೋಗುವುದಕ್ಕೆ ಅನುಕೂಲವಾಗಬೇಕು ಎಂಬ ಉದ್ದೇಶದಿಂದ ಈ ವಾಹನವನ್ನು ಪ್ರಾಯೋಗಿಕವಾಗಿ ಓಡಿಸಲಾಗಿತ್ತು. ಎಲ್ಲರೂ ಅದನ್ನು ಇಷ್ಟ ಪಟ್ಟ ಕಾರಣಕ್ಕಾಗಿ ಎರಡು ಬ್ಯಾಟರಿ ಚಾಲಿತ ಕಾರುಗಳನ್ನು ವಿಧಾನ ಪರಿಷತ್ತಿನ ವತಿಯಿಂದ ಖರೀದಿ ಮಾಡಿದ್ದೇವೆ. ಇವತ್ತು ಅದರ ಉದ್ಘಾಟನೆಯ ಮಾದರಿಯಲ್ಲಿ ಕೆಲವು ಗೌರವಾನ್ವಿತ ಸದಸ್ಯರುಗಳು ಮತ್ತು ನಾವುಗಳು ಅದರಲ್ಲಿ ಪ್ರಯಾಣ ಮಾಡಿದ್ದೇವೆ. ಎಲ್ಲಾ ಸದಸ್ಯರುಗಳೂ ಅದರ ಪೂರ್ಣ ಉಪಯೋಗವನ್ನು ಪಡೆದುಕೊಳ್ಳಬೇಕು. ಮತ್ತು ಅದಕ್ಕೆ ಒಂದು ಟೈಂಟೇಬಲ್ ಅನ್ನು ಘೋಷಣೆ ಮಾಡುತ್ತೇವೆ. ನಾರ್ಮಲ್ ಆಗಿ ಈ ಕಾರು ಶಾಸಕರ ಭವನದಿಂದ ಹೊರಡುತ್ತದೆ. ಅದು ಯಾವಾಗಲೂ ಸುತ್ತುತ್ತಲೇ ಇರುತ್ತದೆ. ಹೆಚ್ಚು ಅಂದರೆ ಈ ಕಾರಿಗಾಗಿ 6–8 ನಿಮಿಷ ಕಾದರೆ ಈ ಕಾರು ಸಿಗುತ್ತದೆ. ಎರಡು ಬ್ಯಾಟರಿ ಚಾಲಿತ ಕಾರು ಇರುವುದರಿಂದ ಅದು ಸುತ್ತುತ್ತಿರುತ್ತದೆ. ಸದನ ನಡೆಯುವ ದಿವಸ ಮುಕ್ಕಾಲು ಗಂಟೆ ಮುಂಚಿನಿಂದ ಮತ್ತು ಸದನ ಮುಗಿಯುವ ತನಕ ಓಡಾಡುತ್ತಿರುತ್ತದೆ. ಮತ್ತು ಬೇರೆ ದಿವಸಗಳಲ್ಲಿ ಕಛೇರಿ ವೇಳೆಯಲ್ಲಿ ಅಂದರೆ ಬೆಳ್ಳಿಗ್ಗೆ 10 ರಿಂದ ಸಂಜೆ 5–30 ರವರೆಗೆ ಅದು ಸುತ್ತುತ್ತಿರುತ್ತದೆ. ಯಾರು ಎಲ್ಲಿ ಬೇಕಾದರೂ ಹತ್ತಿ ಇಳಿಯಬಹುದು. ಅಂದರೆ ಶಾಸಕರ ಭವನದಿಂದ ವಿಧಾನಸೌಧಕ್ಕೆ, ಮಲ್ಟಿಸ್ಟೋರಿಡ್ ಬಿಲ್ಡಿಂಗ್‌ಗೆ,

ವಿಕಾಸಸೌಧಕ್ಕೆ ಹೋಗಿ ಬರುವುದಕ್ಕೆ ಶಾಸಕರಿಗೆ ಅನುಕೂಲವಾಗುತ್ತದೆ. ಎಂ.ಎಸ್.ಬಿಲ್ಡಿಂಗ್ ಬಗ್ಗೆ ಸ್ವಲ್ಪ ಚರ್ಚೆ ನಡೆಯುತ್ತಿದೆ. ಅಲ್ಲಿ ಖಾಸಗಿ ವಾಹನಗಳೂ ಓಡಾಡುತ್ತಿರುತ್ತವೆ ಅದರ ಬಗ್ಗೆ ನೋಡೋಣ.

**ಶ್ರೀ ವಿ.ಆರ್.ಸುದರ್ಶನ್:–** ಅದರಲ್ಲಿಯೇ ಎಲ್ಲಿಯಾದರೂ ನಮ್ಮನ್ನು ರೆಸಾರ್ಟ್‌ಗಳಿಗೆ ಕರೆದುಕೊಂಡು ಹೋಗುತ್ತೀರಾ ಎಂದು....

**ಸಭಾಪತಿಯವರು:–** ಅದು ಎಷ್ಟು ದೂರ ಹೋಗುವುದಿಲ್ಲ, ಇಲ್ಲಿಯೇ ಸುತ್ತುತ್ತಿರುತ್ತದೆ. ಇಲ್ಲಿ ಸುತ್ತಮುತ್ತ ಓಡಾಡುವುದಕ್ಕೆ ಎಲ್ಲ ಶಾಸಕರೂ ಇದರ ಉಪಯೋಗವನ್ನು ಪಡೆದುಕೊಳ್ಳಬೇಕು. ಮೊದಲ ಆದ್ಯತೆ ಶಾಸಕರಿಗೆ ಮತ್ತು ಅವರ ಜೊತೆಯಲ್ಲಿ ಬಂದಿರತಕ್ಕಂಥ ಆಪ್ತ ಸಹಾಯಕರಿಗೆ ತೀರಾ ಖಾಲಿ ಇದ್ದಾಗ ಮತ್ತು ತಾವು ಒಪ್ಪಿಗೆ ಕೊಟ್ಟಲ್ಲಿ ತಮ್ಮ ಜೊತೆಯಲ್ಲಿ ಯಾರಾದರೂ ಸ್ನೇಹಿತರು ಬಂದಿದ್ದಲ್ಲಿ ಅವರನ್ನು ಕೂರಿಸಿಕೊಂಡು ಹೋಗಬಹುದು, ಸಾಮಾನ್ಯವಾಗಿ ಬೇರೆಯವರನ್ನು ಈ ಕಾರಿನಲ್ಲಿ ಕೂರಿಸುವುದಕ್ಕೆ ಇಷ್ಟಪಡುವುದಿಲ್ಲ. ಇದನ್ನು ವಿಧಾನ ಪರಿಷತ್ತಿನ ವತಿಯಿಂದ ಖರೀದಿ ಮಾಡಿದ್ದರೂ ಕೂಡ ವಿಧಾನ ಪರಿಷತ್ತಿನ ಸದಸ್ಯರು ಮತ್ತು ವಿಧಾನ ಸಭೆಯ ಸದಸ್ಯರು ಇದರ ಉಪಯೋಗವನ್ನು ಪಡೆದುಕೊಳ್ಳಬಹುದು ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.ದಯಮಾಡಿ ಇದನ್ನು ಎಲ್ಲರೂ ಗಮನಿಸಬೇಕು.

## 2. ವಿಶೇಷ ಪ್ರಸ್ತಾವ

### ಸದನದ ಸಮನ್ಸ್ ಸದಸ್ಯರಿಗೆ ತಡವಾಗಿ ತಲುಪಿದ ಬಗ್ಗೆ

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಇಂತಹ ಕೆಲಸಗಳಿಗೆ ನಮ್ಮ ಸಹಕಾರ ತಮಗೆ ಯಾವಾಗಲೂ ಇರುತ್ತದೆ. ನಮ್ಮ ವಿಧಾನ ಪರಿಷತ್ತಿನ/ ವಿಧಾನ ಸಭೆಯ ಶಾಸಕರ ಬಗ್ಗೆ ಇಷ್ಟೊಂದು ಕಾಳಜಿ ವಹಿಸುತ್ತಿರುವುದಕ್ಕೆ ತಮ್ಮನ್ನು ಅಭಿನಂದಿಸುತ್ತೇನೆ. ಇವತ್ತು ಅಧಿವೇಶನ ಕರೆಯುತ್ತಿರುವುದರ ಬಗ್ಗೆ ಎಲ್ಲರಿಗೂ ನೋಟೀಸ್ ಅನ್ನು ಕಳುಹಿಸಿದ್ದೀರಿ. ನನ್ನ ಕಚೇರಿಗೆ ನಿನ್ನೆಯ ದಿವಸ ನೋಟೀಸ್ ತಲುಪಿದೆ. ನಾನು ನಮ್ಮ ಕಚೇರಿಯ ಕಾರ್ಯದರ್ಶಿಯವರ ಬಳಿ

ಮತ್ತು ಆಪ್ತ ಸಹಾಯಕರ ಬಳಿ ಕಳೆದ ಮೂರು ದಿವಸಗಳಿಂದ ಈ ಕುರಿತು ಕಚೇರಿಗೆ ನೋಟೀಸ್ ಬಂದಿದೆಯೇ ಅಧಿವೇಶನ ಎಷ್ಟು ಗಂಟೆಗೆ ಇದೆ ಎಂದು ಕೇಳಿದ್ದಕ್ಕೆ ಅವರು ಇನ್ನೂ ನಮಗೆ ನೋಟಿಸ್ ಬಂದಿಲ್ಲ ಎಂದು ಹೇಳುತ್ತಲೇ ಇದ್ದರು. ಅದೂ ನಿನ್ನೆ ಸಂಜೆ 5 ಗಂಟೆಗೆ ನನ್ನ ಕಚೇರಿಗೆ ಈ ನೋಟೀಸ್ ಬಂದಿದೆ. ಅದೇ ರೀತಿಯಲ್ಲಿ ನಮ್ಮ ಎಲ್ಲಾ ಸದಸ್ಯರಿಗೂ ಈ ನೋಟೀಸ್ ತಡವಾಗಿ ಹೋಗಿದೆ. ಕಮ್ಯೂನಿಕೇಶನ್ ಬಹಳ ತಡವಾಗಿದೆ. ಏಕೆ ಈ ರೀತಿ ಆಯಿತು ಎಂಬುದು ತಿಳಿಯುತ್ತಿಲ್ಲ. ಅಧಿವೇಶನ ನಡೆಯುವುದಕ್ಕೆ ಹತ್ತು ದಿವಸಗಳ ಮುಂಚೆ ನೋಟಿಸ್ ಅನ್ನು ಹೊರಡಿಸಿ ನಮ್ಮೆಲ್ಲರಿಗೂ ಕಳುಹಿಸಬೇಕಾಗಿತ್ತು. ಪ್ರಶ್ನೆಗಳನ್ನು ಕಳುಹಿಸುವವರಿಗೂ ಸಮಯ ಬೇಕಾಗುತ್ತದೆ. 7 ದಿವಸ ಮುಂಚೆಯೇ ಪ್ರಶ್ನೆಗಳನ್ನು ಕಳುಹಿಸಬೇಕಾಗುತ್ತದೆ. ಇದಕ್ಕೆ ಯಾವ ತೊಂದರೆಯಾಗಿತ್ತು. ರೆಸಾರ್ಟಿಗೆ ಹೋಗುವವರು ಹೋಗಿದ್ದಾರೆ. ಅಲ್ಲಿ ಸರ್ಕಾರ ನಡೆಸುವುದಕ್ಕೆ ತಯಾರಿ ನಡೆಸುವವರು ನಡೆಸುತ್ತಿದ್ದಾರೆ. ಆದರೆ ನಮ್ಮ ವಿಧಾನ ಮಂಡಲದ ಸಚಿವಾಲಯದ ಅಧಿಕಾರಿಗಳಿಗೆ ಏನು ಕೆಲಸ ? ಈ ರೆಸಾರ್ಟಿಗೆ ಹೋದವರು ಸರ್ಕಾರವನ್ನು ರಚನೆ ಮಾಡುತ್ತಾರಾ ಅಥವಾ ಈಗ ಇಲ್ಲಿ ಇರುವ ಸರ್ಕಾರ ಅಸ್ತಿತ್ವದಲ್ಲಿ ಇರುತ್ತದೆಯೇ ಎಂಬ ಬಗ್ಗೆ ಯೋಚನೆ ಮಾಡಿಕೊಂಡು ಇದನ್ನು ಕಳುಹಿಸುವಲ್ಲಿ ನಿಧಾನವಾಯಿತೇ ಎಂಬುದು ನಮ್ಮ ಪ್ರಶ್ನೆಯಾಗಿದೆ. ರೆಸಾರ್ಟ್‌ಗೆ ಹೋದವರು ಏನಾದರು ಸರ್ಕಾರವನ್ನು ಪ್ರಾರಂಭ ಮಾಡುತ್ತಾರೆಯೇ? ಇಲ್ಲಿರುವಂತಹ ಸರ್ಕಾರ ಇರುತ್ತದೆಯೋ ಎನ್ನುವುದರ ಬಗ್ಗೆ ಯೋಚನೆ ಮಾಡಿಕೊಂಡು ನಿಧಾನವಾಯಿತೇ ಎನ್ನುವುದನ್ನು ಹೇಳಬೇಕಾಗುತ್ತದೆ. ಆಮೇಲೆ ನಮಗೆಲ್ಲಾ ಒಂದು ರೀತಿಯ ಆತಂಕ ಮತ್ತು ಬೇಸರ ಎಂದರೆ, ಸರ್ಕಾರ ಎಲ್ಲಿದೇ? ಸರ್ಕಾರ ಶ್ರೀ ಡಿ.ವಿ.ಸದಾನಂದಗೌಡರ ಕೈಯಲ್ಲಿದೆಯೇ ಅಥವಾ ನಮ್ಮ ಬಿ.ಎಸ್.ಯಡಿಯೂರಪ್ಪನವರ ಕೈಯಲ್ಲಿದೆಯೇ ಎನ್ನುವುದೊಂದು ನಮಗೆ ಆತಂಕ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ಸರ್ಕಾರ ಇಲ್ಲಿಯೇ ಇದೆ.

(ಗೊಂದಲ)

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ಇಡೀ ರಾಜ್ಯದ ಜನರಿಗೆ ಆತಂಕ ಇರುವುದು ಗೊತ್ತಿದೆ.

(ಗೊಂದಲ)

**ಶ್ರೀ ಆರ್.ವಿ.ವೆಂಕಟೇಶ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಸರ್ಕಾರ ಇಲ್ಲಿಯೇ ಇದ್ದಿದ್ದರೆ ಇವತ್ತು ಸುಮಾರು ಮಂತ್ರಿಗಳು ಸದನದಲ್ಲಿ ಹಾಜರಿರಬೇಕಾಗಿತ್ತು. ಅವರುಗಳು ಎಲ್ಲಿಗೆ ಹೋಗಿದ್ದಾರೆ?

(ಗೊಂದಲ)

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ಇವರಿಗೆ ಖುಷಿಯಾಗಿರಬಹುದು. ಇವರು ಒಂದು ರೀತಿಯಲ್ಲಿ ಮಜಾವನ್ನು ತೆಗೆದುಕೊಳ್ಳುತ್ತಿದ್ದಾರೆ.

(ಗೊಂದಲ)

**ಸಭಾಪತಿಯವರು:-** ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅವರು ಮಾತನಾಡುವುದಕ್ಕೆ ಬಿಡಿ.

(ಗೊಂದಲ)

ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಬೇಕು. ಈಗ ಶ್ರೀ ವೀರಣ್ಣ ಮತ್ತಿಕಟ್ಟಿಯವರು ಮಾತನಾಡುತ್ತಾರೆ.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ :-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ ಅದಕ್ಕೆ ಅವರು ಉತ್ತರವನ್ನು ಹೇಳುತ್ತಾರೆ. ಅವರಿಗೆ ಅವಕಾಶ ಕೊಡಿ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ನನಗನ್ನಿಸಿದನ್ನು ನಾನು ಹೇಳಬೇಕಾಗುತ್ತದೆ.

**ಡಾ: ಎ.ಹೆಚ್.ಶಿವಯೋಗಿಸ್ವಾಮಿ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಇವತ್ತಿನ ಅಜೆಂಡಾದಲ್ಲಿ ಸಂತಾಪ ಸೂಚನೆಗಳು ಎಂದು ಇರುವುದರಿಂದ ಅದಕ್ಕೆ ಸಂಬಂಧಪಟ್ಟಂತಹ ವಿಷಯ ಯಾವುದಾದರು ಇದ್ದರೆ ಮಾತನಾಡಲಿ. ರಾಜಕೀಯ ಮಾಡುವಂಥದ್ದನ್ನು ಮಾಡಬೇಡಿ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ಡಾ: ವಿ.ಎಸ್. ಆಚಾರ್ಯರವರ ಬಗ್ಗೆ ಆಡಳಿತ ಪಕ್ಷದವರ ಕಡೆಗಿಂತಲೂ ವಿರೋಧ ಪಕ್ಷದವರಿಗೆ ಹೆಚ್ಚು ಗೌರವವಿದೆ. ಇದು ರಾಜಕೀಯವಲ್ಲ. ಈ ರೀತಿ ಆತಂಕದ ಪರಿಸ್ಥಿತಿ ಇದೆಯಲ್ಲಾ, ಅತಂತ್ರ ಸ್ಥಿತಿ ಇದೆಯಲ್ಲಾ ಇದಕ್ಕೆ ಪರಿಹಾರವನ್ನು ಕಂಡು ಹಿಡಿಯಿರಿ. ಸರ್ಕಾರ ಇಲ್ಲದೇ ಇದ್ದರೆ ಏನು ಮಾಡುವುದಕ್ಕಾಗುತ್ತದೆ?

(ಗೊಂದಲ)

**ಸಭಾಪತಿಯವರು:-** ಒಂದು ನಿಮಿಷ ವಿರೋಧ ಪಕ್ಷ ನಾಯಕರ ಅಭಿಪ್ರಾಯವನ್ನು ಕೇಳೋಣ.

**ಡಾ: ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೆ, ಇವತ್ತಿನ ಅಜೆಂಡಾದಲ್ಲಿರುವ ಸಂತಾಪ ಸೂಚನೆಯನ್ನು ತೆಗೆದುಕೊಳ್ಳಿ.

**ಸಭಾಪತಿಯವರು:-** ಈಗ ಸಂತಾಪ ಸೂಚನೆಯನ್ನು ತೆಗೆದುಕೊಳ್ಳೋಣ. ಅದಕ್ಕಿಂತ ಮುಂಚೆ ಮಾನ್ಯ ವಿರೋಧ ಪಕ್ಷದ ನಾಯಕರು ಏನೋ ಹೇಳುತ್ತೇನೆಂದು ಹೇಳಿದರು. ಅದುದರಿಂದ ಅವರು ಏನು ಹೇಳುತ್ತಾರೆ ಕೇಳೋಣ.

**ಡಾ: ಎ.ಹೆಚ್. ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೆ, ದಯಮಾಡಿ ಅದನ್ನು ಅಲೋ ಮಾಡಬೇಡಿ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಇವತ್ತು ಈ ಸದನಕ್ಕೆ 8–10 ಜನ ಸಚಿವರುಗಳು ಸದನದಲ್ಲಿ ಹಾಜರಿರಬೇಕಾಗಿತ್ತು. ಅವರು ಬಂದಿಲ್ಲ. ಯಾವ ಕಾರಣಕ್ಕೆ ಸದನಕ್ಕೆ ಬಂದಿಲ್ಲವೆಂದು ವಿಫ್ ಅವರು ಹೇಳಬೇಕು. ಅಲ್ಲಿ ಗೋಲ್ಡನ್ ರೆಸಾರ್ಟ್‌ನಲ್ಲಿ ಮಜಾ ಮಾಡುತ್ತಿದ್ದಾರೆ. ಸರ್ಕಾರ ನಡೆಸುವವರು ಇಲ್ಲಿ ಬಂದು ಕೆಲಸ ಮಾಡಬೇಕು. ಅದನ್ನು ನಾವು ಕೇಳುತ್ತಿರುವಂಥದ್ದು. ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದರೆ ಇಡೀ ಸರ್ಕಾರ ಇದ್ದಂತೆ ಆಗುವುದಿಲ್ಲ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ಇಲ್ಲಿ ಆ ವಿಷಯಗಳು ಈಗ ಪ್ರಸ್ತುತವಲ್ಲ. ತಾವು ಸಂತಾಪ ಸೂಚನೆಯನ್ನು ಮಂಡಿಸಬೇಕು. ಬೇರೆ ವಿಷಯಗಳಿಗೆ ಸಂಬಂಧಪಟ್ಟಂತೆ ವಿಷಯಗಳಿದ್ದರೆ ಅದಕ್ಕೆ ಅವರು ನೋಟೀಸ್ ಕೊಡಬೇಕು. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳಿದ್ದಾರೆ. ಸಚಿವ ಸಂಪುಟ ಸಹೋದ್ಯೋಗಿಗಳಾಗಿ ನಾವುಗಳಿದ್ದೇವೆ.

(ಗೊಂದಲ)

**ಶ್ರೀಮತಿ ಮೋಟಮ್ಮ :–** ಮಾನ್ಯ ಸಭಾಪತಿಯವರೆ, ರಾಜ್ಯದ ಜನರಲ್ಲಿ ನಮ್ಮ ಮುಖ್ಯಮಂತ್ರಿಗಳಾದ ಶ್ರೀ ಡಿ.ವಿ.ಸದಾನಂದಗೌಡರು ನಾಳೆಯ ದಿವಸ ಬಜೆಟ್ ಅನ್ನು ಮಂಡಿಸುತ್ತಾರೆಯೋ ಅಥವಾ ಗೋಲ್ಡನ್ ರೆಸಾರ್ಟ್‌ನಿಂದ ಬಂದು ಮಂಡಿಸುತ್ತಾರೆಯೋ?

(ಗೊಂದಲ)

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅವರು ಮಾತನಾಡುವಾಗ ನೀವುಗಳು ಮಧ್ಯೆ ಬಾಯಿ ಹಾಕಿದರೆ ಹೇಗೆ?

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಆಡಳಿತ ಪಕ್ಷದ ಸದಸ್ಯರನ್ನು ಸುಮ್ಮನೆ ಇರುವುದಕ್ಕೆ ಹೇಳಿ.

**ಸಭಾಪತಿಯವರು:–** ಆಡಳಿತ ಪಕ್ಷದವರಿಗೂ ಕೂಡ ಕುಳಿತುಕೊಳ್ಳುವುದಕ್ಕೆ ಹೇಳುತ್ತೇನೆ. ದಯಮಾಡಿ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅವರು react ಮಾಡಿದ್ದಾರೆ, ಏನೆಂದು ನೋಡೋಣ. ನೀವುಗಳು ಮಧ್ಯೆ ಮಧ್ಯೆ ಬಾಯಿ ಹಾಕಿಬಿಟ್ಟರೆ ಅವರು ಮಾತನಾಡುವುದು ಹೇಗೆ ಸಾಧ್ಯ? ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಿ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ನೀವು ಹಿರಿಯರಿದ್ದೀರಿ. ಹಲವಾರು ಸರ್ಕಾರಗಳನ್ನು ನೋಡಿದ್ದೀರಿ. ಈ ರೀತಿ ಅವ್ಯವಸ್ಥೆ, ಅತಂತ್ರ ಸ್ಥಿತಿ ಯಾವತ್ತಾದರೂ ಕೂಡ ಆಗಿತ್ತಾ? ಇದು ಬಜೆಟ್ ಅಧಿವೇಶನ ಬೇರೆ.

**ಸಭಾಪತಿಯವರು:–** ನೀವು ನನಗೆ ಪ್ರಶ್ನೆಯನ್ನು ಕೇಳುವ ಹಾಗಿಲ್ಲ. ನಾನು ಬರೀ ಸದನವನ್ನು ನಡೆಸುವುದಷ್ಟೇ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ನಾವು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ನಮ್ಮ ಸಚಿವ ಮಹೋದಯರು ರೆಸಾರ್ಟ್‌ಗೆ ಹೋಗಿ ಕುಳಿತುಕೊಂಡು ಮಜಾ ಮಾಡುತ್ತಿದ್ದರೆ ಹೇಗಿರುತ್ತದೆ? ಸರ್ಕಾರಕ್ಕೆ ಜವಾಬ್ದಾರಿ ಇದೆಯೇ ಎನ್ನುವುದು ನನ್ನ ಪ್ರಶ್ನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ವಿರೋದ ಪಕ್ಷದ ನಾಯಕರಾದಂತಹ ಶ್ರೀಮತಿ ಮೋಟಮ್ಮನವರು ಈಗ ಪ್ರಸ್ತುತವಲ್ಲದ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ಸರ್ಕಾರ ಒಳ್ಳೆಯ

ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಡಿ.ವಿ.ಸದಾನಂದಗೌಡರ ನೇತೃತ್ವದಲ್ಲಿ ನಡೆಸಿಕೊಂಡು ಬಂದಿದ್ದಾರೆ.

**ಶ್ರೀಮತಿ ಮೋಟಮ್ಮ :–** ಮಾನ್ಯ ಸಭಾಪತಿಯವರೆ, ಅದರ ಬಗ್ಗೆ ನನಗೂ ಕೂಡ ಗೌರವ ಇದೆ. ಅವರೇ ಸರ್ಕಾರವನ್ನು ನಡೆಸುವುದಕ್ಕೆ ನಿಮ್ಮ ಪಕ್ಷದವರೇ ಬಿಡುತ್ತಿಲ್ಲವಲ್ಲ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :–** ಮಾನ್ಯ ಸಭಾಪತಿಯವರೆ, ಚೆನ್ನಾಗಿ ನಡೆಸಿಕೊಂಡು ಹೋಗುವುದಕ್ಕೆ ನಾವು ಬಂದಿದ್ದೇವೆ. ಸಚಿವರುಗಳೆಲ್ಲಾ ನಾವು ಸಕ್ರೀಯವಾಗಿ ಬಂದು ಕುಳಿತುಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಬಂದು ಕುಳಿತುಕೊಂಡಿದ್ದಾರೆ. ಇವತ್ತಿನ ಅಜೆಂಡಾ ಪ್ರಕಾರ ಸಂತಾಪ ಸೂಚನೆ ಇದೆ. ಅದೇ ರೀತಿಯಲ್ಲಿ ನಡೆಸಿಕೊಂಡು ಹೋಗೋಣ. ಬೇರೆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಈ ಸದನ ವೇದಿಕೆಯಾಗಬಾರದು.

(ಗೊಂದಲ)

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರು ಮಾತನಾಡುವಂತಹ ಸಮಯದಲ್ಲಿ ಮಾನ್ಯ ಸಚಿವರು ಮಧ್ಯೆ ಬಾಯಿ ಹಾಕಿದ್ದಾರೆ. ಮಾತನಾಡಲಿ ಬಿಡಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ನಿಯಮಾನುಸಾರ ನಿಮ್ಮ ಅನುಮತಿಯನ್ನು ತೆಗೆದುಕೊಳ್ಳದೇ ಯಾವ ರೀತಿಯಾಗಿ ಬೇರೆ ಬೇರೆ ವಿಷಯಗಳನ್ನು ಪ್ರಸ್ತಾಪ ಮಾಡುತ್ತಾರೆ.

**ಶ್ರೀಮತಿ ಮೋಟಮ್ಮ :–** ಮಾನ್ಯ ಸಭಾಪತಿಯವರೆ, ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುವಂತಹ ಕೆಲಸವನ್ನು ಯಾವತ್ತು ಮಾಡಬಾರದು.

**ಶ್ರೀ ಯಂ.ಸಿ.ನಾಣಯ್ಯ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾವು ಪ್ರಜಾತಂತ್ರ ವ್ಯವಸ್ಥೆಯನ್ನು ಕೆಳಮಟ್ಟಕ್ಕೆ

ಇಳಿಸುತ್ತಿರುವಂತಹ ವಿಚಾರದಲ್ಲಿ ವಿರೋಧಪಕ್ಷದ ನಾಯಕರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಈ ಮಾತು ಆಡಳಿತ ಪಕ್ಷ ಮತ್ತು ಮಾನ್ಯ ಮುಖ್ಯಮಂತ್ರಿಗಳ ವಿರುದ್ಧದ ಬಗ್ಗೆಯಲ್ಲ. ಒಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡಿ, ಇಂತಹ ಬಜೆಟ್ ಅಧಿವೇಶನದ ಸಂದರ್ಭದಲ್ಲಿ ಆಡಳಿತ ಪಕ್ಷದ ಸಚಿವ ಸಂಪುಟದ ಸದಸ್ಯರೇ ಸದನಕ್ಕೆ ಹಾಜರಾಗದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿರುವಂತಹ ಸಂದರ್ಭದಲ್ಲಿ ನನ್ನ ಚಿಂತನೆಯನ್ನು ನಾನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ನಿಮ್ಮ ಪರಮೋಚ್ಛ ಅಧಿಕಾರ ರಾಜ್ಯಾಂಗ ಬದ್ಧವಾಗಿ ಇರುವಂಥದ್ದನ್ನು ಸ್ವಲ್ಪ ಗಟ್ಟಿ ಮನಸ್ಸಿನಿಂದ ತಾವು ಚಾಲನೆಗೆ ಕೊಡುವುದಕ್ಕೆ ತಮ್ಮ ಕೈಯಲ್ಲಿ ಅಧಿಕಾರ ಇದೆ. ನಾನು ಹೇಳುತ್ತಿರುವುದೇನೆಂದರೆ, ಪ್ರಜಾತಂತ್ರ ವ್ಯವಸ್ಥೆಯನ್ನು ಈ ರೀತಿ ಹಳ್ಳಕ್ಕೆ ತಳ್ಳುವಂತಹ ಪರಿಸ್ಥಿತಿ ನಿರ್ಮಾಣವಾದರೆ ಹೇಗೆ? ಪ್ರಪಂಚದಲ್ಲಿಯೇ ನಮ್ಮ Parliamentary Democracy with all the deficiency that is suppose to be the best in the world' ಅದಕ್ಕೆ ನಾವು ತಯಾರಾಗಿಲ್ಲ ಎನ್ನುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದರೆ ಹೇಗೆ ? ಅವರು ಯಾರನ್ನು ನೇಮಕ ಮಾಡಿದ್ದಾರೆ. ಸಂವಿಧಾನದ ನಿಯಮ 163ರ ಅಡಿಯಲ್ಲಿ ರಾಜ್ಯಾಂಗ ಬದ್ಧವಾಗಿ ನೇಮಕ ಮಾಡುತ್ತಿರುವಂತಹ ಮಂತ್ರಿಗಳು 'They hold office only during the pleasure of the Chief Minister' ಇಂತಹ ಪರಿಸ್ಥಿತಿಯಲ್ಲಿ ನಾನು ಹೇಳುವುದೇನೆಂದರೆ, ಅವರು ಬಜೆಟ್ ಅಧೀವೇಶನಕ್ಕೆ ಬರುವುದಿಲ್ಲವೆಂದು ಹೇಳಿದರೆ ಅವರಿಗೆ ಇರತಕ್ಕಂತಹ ಅಧಿಕಾರವಿದೆ. Let me tel you, internal democracy in a party. I do accept it and let them do that.

ಆದರೆ ನಾನು ಹೇಳುವುದೇನೆಂದರೆ, ಸಚಿವ ಸಂಪುಟ ಸದಸ್ಯರಾಗಿಯೇ ಇದ್ದುಕೊಂಡು ರಾಜೀನಾಮೆಯನ್ನು ಕೂಡ ಕೊಡದೇ ಮಾನ್ಯ ಮುಖ್ಯಮಂತ್ರಿಗಳ ವಿರುದ್ಧವೇ ಸಮರವನ್ನು ಸಾರುತ್ತಿರುವುದು...

(ಗೊಂದಲ)

**ಸಭಾಪತಿಯವರು:–** ಒಂದು ನಿಮಿಷ ಮಾನ್ಯ ಮುಖ್ಯಮಿಂತ್ರಿಗಳು ಮಾತನಾಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವುದಕ್ಕೆ ಎದ್ದಾಗ ಬೇರೆ ಎಲ್ಲರೂ ಕುಳಿತುಕೊಳ್ಳುವಂತಹ ಪದ್ಧತಿ ಇದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ :–** ಮಾನ್ಯ ಸಭಾಪತಿಯವರೆ, ಈಗ ವಿರೋಧ ಪಕ್ಷದವರು ಯಾವ ನಿಯಮದ ಅಡಿಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ? ಅವರೇ ಎದ್ದು ನಿಂತು ಮಾತನಾಡುತ್ತಿದ್ದಾರೆ. ಯಾವ ನಿಯಮದ ಅಡಿಯಲ್ಲಿ ಅವರುಗಳಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೀರಿ? ಇಡೀ ರಾಜ್ಯಾಂಗದ ಬಗ್ಗೆ ಎಲ್ಲದ್ದರ ಬಗ್ಗೆ ಮಾತನಾಡುತ್ತಿದ್ದಾರೆ.

**ಡಾ : ಎ.ಹೆಚ್.ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೆ, ಇವತ್ತಿನ ಅಜೆಂಡಾದಲ್ಲಿ ಸಂತಾಪ ಸೂಚನೆಗಳಿವೆ ಅದನ್ನು ಬಿಟ್ಟು ಬೇರೆ ವಿಷಯವನ್ನು ತೆಗೆದುಕೊಂಡು ಮಾತನಾಡುವುದು ಎಷ್ಟು ಸರಿ.

**ಸಭಾಪತಿಯವರು:–** ಈಗ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

**ಶ್ರೀ ವೀರಣ್ಣ ಮತ್ತಿಕಟ್ಟಿ :–** ಮಾನ್ಯ ಸಭಾಪತಿಯವರೆ, ಕ್ಯಾಪ್ಟನ್ ಗಣೇಶ್ ಕಾರ್ಣೀಕ್‌ರವರು ರೂಲ್ ಬಗ್ಗೆ ಹೇಳುತ್ತಾರೆ. ಅವರ ಪಕ್ಷದವರಿಗೆ ಏನಾದರು ರೂಲ್ಸ್ ಇದೆಯೇ ಎಂದು ಆತ್ಮಸಾಕ್ಷಿಯಾಗಿ ಹೇಳಲಿ, ನಮಗೆ ನಮ್ಮದೇ ಆದಂತಹ ರೂಲ್ಸಗಳಿವೆ. ನಾವು ಗೌರವಿಸುತ್ತೇವೆ. ರೆಸಾರ್ಟ್‌ಗೆ ಹೋಗಿ ಇಡೀ ರಾಜ್ಯದ ವಾತಾವರಣವನ್ನು ಆತಂಕ್ಕೆ ತಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ ಇಡೀ ರಾಜ್ಯದಲ್ಲಿ ಸಂಘರ್ಷ, ನೋವಿನ ವಾತಾವರಣವನ್ನು ಸೃಷ್ಟಿ ಮಾಡಿದ್ದಾರೆ. ಅಸಹಾಯಕತೆ ನಿರ್ಮಾನ ಮಾಡಿದ್ದಾರೆ. ರಾಜ್ಯದಲ್ಲಿ ಬಜೆಟ್ ಅಧಿವೇಶನದ ಇತಿಹಾಸದಲ್ಲಿ ಎಂದೂ ಕೂಡ ಈ ರೀತಿಯಾಗಿಲ್ಲ. ಇದು ನ್ಯಾಯವೇ, ಇದರ ಪರಿಣಾಮವೇನು? ನಾವು ತಮಗೆ ವಿರೋಧವಿಲ್ಲ. ಉತ್ತಮ ಸರ್ಕಾರ ಕೊಡಿ. ಆದರೆ ಈ

ವಾತಾವರಣದಿಂದ ಇಡೀ ರಾಜ್ಯದ ಪರಿಸ್ಥಿತಿ ಏನಾಗುತ್ತದೆ. ಅದನ್ನೇ ನಮ್ಮ ನಾಯಕರು ಹೇಳಿದ್ದು.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಕೇಳೋಣ

**ಶ್ರೀ ಡಿ. ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೆ. ಮಾನ್ಯ ವಿರೋಧ ಪಕ್ಷದ ನಾಯಕರ ಮತ್ತು ಸದಸ್ಯರಗಳ ಆತಂಕ ಒಂದು ರೀತಿಯಲ್ಲಿ ಸರ್ಕಾರ ಚೆನ್ನಾಗಿ ನಡೆಯಬೇಕು ಮತ್ತು ಸರ್ಕಾರ ಒಳ್ಳೆಯ ಕೆಲಸ ಮಾಡಬೇಕೆಂದು ಅವರ ಕಾಳಜಿ ಇದೆ. ಅದನ್ನು ಸ್ವಾಗತ ಮಾಡುತ್ತೇನೆ. ಅದರಲ್ಲಿ ಎರಡು ಮಾತುಗಳಿಲ್ಲ. ಏಕೆಂದರೆ ಯಾರೇ ಜನಪ್ರತಿನಿಧಿಯಾದವರು ಅದು ಅವರ ಜವಾಬ್ದಾರಿ. ಇಡೀ ರಾಜ್ಯದ ಆಡಳಿತ ಯಶಸ್ವಿಯಾಗಿ ಒಳ್ಳೆಯದಾಗಿ ನಡೆಯಬೇಕೆಂದು. ಆದರೆ ಇವತ್ತು ನಾವು ಇಲ್ಲಿ ಚರ್ಚೆ ಮಾಡಿದ್ದೇವೆ. ಅವರ ಕಾಳಜಿಯನ್ನು ಆವರು ವ್ಯಕ್ತಪಡಿಸಲಿ ನಾನು ಬೇಡವೆಂದು ಹೇಳುವುದಿಲ್ಲ. ಆದರೆ ರೂಲಿನ ಅಡಿಯಲ್ಲಿ ನಾವು ಏನು ಕೆಲಸ ಕಾರ್ಯವನ್ನು ಮಾಡಬೇಕೋ ಅದನ್ನು ನಾವು ಮಾಡಬೇಕಾಗಿದೆ. ಈಗ ವಿರೋಧಪಕ್ಷದ ನಾಯಕರು ಮತ್ತು ಸನ್ಮಾನ್ಯ ಯಂ.ಸಿ.ನಾಣಯ್ಯನವರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಎಲ್ಲಿಯೋ ಒಂದು ಕಡೆ ಹಾಗೆ ಆಗುತ್ತದೆ. ಹೀಗೆ ಆಗುತ್ತದೆಂದು ಹೇಳಿದ್ದಾರೆ. ಒಂದಷ್ಟು ನಾನು ಹೇಳುವುದಕ್ಕೆ ಇಚ್ಛೆ ಪಡುವಂಥದ್ದು. ಇದು ನನ್ನ prerogative power ಮತ್ತು ನನ್ನ ಪಕ್ಷದ ಆಂತರಿಕ ವಿಚಾರಗಳ ಬಗ್ಗೆ ಇದನ್ನೂ ಸದನ ಚರ್ಚೆ ಮಾಡುವುದಕ್ಕೆ ಇರುವಂಥದ್ದಲ್ಲ. ಇದನ್ನು ನಾನು ಅಲ್ಲಿ ಚರ್ಚೆ ಮಾಡಬೇಕು. ವಿರೋಧ ಪಕ್ಷದವರು ತಮ್ಮ ಆತಂಕವನ್ನು ವ್ಯಕ್ತ ಪಡಿಸಿದ್ದಾರೆ. ಸಮರ್ಪಕವಾದಂತಹ ಆಡಳಿತವನ್ನು ಕೊಡುವಂಥದ್ದು ನನ್ನ ಜವಾಬ್ದಾರಿ ಇದೆ. ಅದರ ಬಗ್ಗೆ ನಾನು ಪ್ರಯತ್ನ ಪಡುತ್ತಿದ್ದೇನೆ. ಅದರಲ್ಲಿ ನಾನು ಯಶಸ್ವಿ ಯಾಗುತ್ತಿದ್ದೇನೆ. ಇದರಲ್ಲಿ ಅವರಿಗೆ ಯಾವುದೇ ಸಂಶಯಗಳು ಅವರಿಗೆ ಬೇಡ. ಎಲ್ಲಿಯಾದರೂ ಲೋಪ–ದೋಷಗಳಿದ್ದರೆ ಸದನ ಇದೆ. ಅದನ್ನು ಸದನದಲ್ಲಿ ಪ್ರಸ್ತಾಪ ಮಾಡಬೇಕು. ಅದಕ್ಕೆ ನಾನು ಉತ್ತರವನ್ನು ಕೊಡುವುದಕ್ಕೆ ತಯಾರಿದ್ದೇನೆ.

ನನ್ನ ಪಕ್ಷದ ಆಂತರಿಕ ವಿಚಾರ ಮತ್ತೊಂದನ್ನು ನಾನು ಬೇರೆ ಬೇರೆ ಹಂತದಲ್ಲಿ ಭಾಗಿಯಾಗಿ...

(ಗೊಂದಲ)

**ಸಭಾಪತಿಯವರು:–** ಈಗ ವಿರೋಧ ಪಕ್ಷದ ನಾಯಕರಿಗೆ ಅವಕಾಶವನ್ನು ಕೊಡೋಣ.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೆ. ನಾವು ಈಗ ಅವರ ಪಕ್ಷದ ಆಂತರಿಕ ವಿಚಾರವನ್ನು ಚರ್ಚೆ ಮಾಡುತ್ತಿಲ್ಲ. ಮಾನ್ಯ ಸಚಿವರುಗಳು ಮತ್ತು ಆಡಳಿತ ಪಕ್ಷದ ಸದಸ್ಯರುಗಳು ರೆಸಾರ್ಟ್‌ನಲ್ಲಿ ಉಳಿದುಕೊಂಡು ಆತಂಕವನ್ನು ಉಂಟು ಮಾಡುತ್ತಿದ್ದಾರೆ. ಇದು ರಾಜ್ಯದ ಜನರ ಮೇಲೆ ಏನು ಪರಿಣಾಮ ಬೀರುತ್ತಿದೆ.?

(ಗೊಂದಲ)

**ಡಾ:ಎ.ಹೆಚ್.ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೆ, ಈಗ ಸಂತಾಪ ಸೂಚನೆಗಳನ್ನು ತೆಗೆದುಕೊಳ್ಳಿ. ವಿರೋಧ ಪಕ್ಷದವರು ಡಾ:ವಿ.ಎಸ್. ಆಚಾರ್ಯರವರ ಬಗ್ಗೆ ಅಗೌರವವನ್ನು ತೋರಿಸುತ್ತಿದ್ದಾರೆ ಎಂದು ಆಗಬಾರದು.

(ಗೊಂದಲ)

(12:30 ಗಂಟೆ)

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ...

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ತಮಗೆ ಮಾತನಾಡಲು ಆವಕಾಶ ಕೊಡುತ್ತೇನೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಮಾತುಗಳನ್ನು ಮುಗಿಸಲಿ, ತಾವು ಕುಳಿತುಕೊಳ್ಳಿ.

(ಗೊಂದಲ)

**ಸಭಾಪತಿಯವರು:-** ಈಗ ಒಂದು ಕೆಲಸ ಮಾಡೋಣ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ಇಲ್ಲ, ನಾವು ಬಿ.ಜೆ.ಪಿ. ಪಕ್ಷದ ಆಂತರಿಕ ವಿಚಾರದ ಬಗ್ಗೆ ಮಾತನಾಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಹೇಳಿದರು, ನಾವು ಅವರ ಆಂತರಿಕ ವಿಚಾರದ ಬಗ್ಗೆ, ಬಿಜೆಪಿ ಪಕ್ಷದ ಆಂತರಿಕ ವಿಚಾರದ ಬಗ್ಗೆ ಮಾತನಾಡುತ್ತಿಲ್ಲ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಸಭಾಪತಿಯವರೇ, ತಾವು ವಿರೋಧ ಪಕ್ಷದವರು ಎತ್ತಿರುವಂತಹ ವಿಚಾರದ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಬಾರದು. ಈ ವಿಷಯವನ್ನು ಆವರು ಬೇರೆ ರೀತಿಯಲ್ಲಿ ಚರ್ಚೆ ಮಾಡುವದಕ್ಕೆ ಬಯಸುವುದಾದರೆ ಅದಕ್ಕೆ ನಿಯಮಾನುಸಾರವಾಗಿ ತಾವು ಅವಕಾಶ ಕೊಡಬಹುದು, ಆದರೆ ಈ ವಿಷಯದ ಬಗ್ಗೆ ಇವೊತ್ತಿನ ದಿವಸ ಈ ರೀತಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಆದ್ದರಿಂದ ತಾವೀಗ ಕಾರ್ಯಕಲಾಪಗಳ ಪಟ್ಟಿಯಲ್ಲಿರುವ ಸಂತಾಪ ಸೂಚನೆಯ ವಿಚಾರವನ್ನು ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ,

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ನಾವು ಬಿ.ಜೆ.ಪಿ. ಪಕ್ಷದ ಆಂತರಿಕ ವಿಚಾರದ ಬಗ್ಗೆ ಮಾತನಾಡುತ್ತಿಲ್ಲ. ಆದರೆ ಅದರಿಂದ ಈ ರಾಜ್ಯದ ಜನತೆಯ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬುದನ್ನು ತಾವು ಸಹ ಗಮನಿಸಬೇಕಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಬಡ್ಜೆಟ್ ಸೆಷನ್ ಅತ್ಯಂತ ಅಮೂಲ್ಯವಾದದ್ದು.

(ಗೊಂದಲ)

**ಡಾ:ಎ.ಹೆಚ್.ಶಿವಯೋಗಿಸ್ವಾಮಿ ( ಸರ್ಕಾರದ ಮುಖ್ಯ ಸಚೇತಕರು ):-** ಸನ್ಮಾನ್ಯ ಸಭಾಪತಿಯವರೇ, ಇವೊತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಸಂತಾಪ ಸೂಚನೆಯ ವಿಷಯವಿದೆ, ಅದು ಮುಗಿಯಲಿ, ಆನಂತರ ಬೇರೆ ವಿಷಯಗಳನ್ನು ಪ್ರಸ್ತಾಪ ಮಾಡಬಹುದಾಗಿದೆ. ಸಂತಾಪ ಸೂಚನೆಯ ವಿಚಾರವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡದೆ ತಾವೆಲ್ಲಾ ಒಂದು ರೀತಿಯಲ್ಲಿ ಡಾ: ವಿ.ಎಸ್.ಆಚಾರ್ಯ ಅವರಿಗೆ ಅಗೌರವವನ್ನು ತೋರಿಸುತ್ತಿದ್ದೀರಿ. ಸಂತಾಪ ಸೂಚನೆಯ ಸಂದರ್ಭದಲ್ಲಿ ಕೂಡ ಈ ರೀತಿ ರಾಜಕೀಯ ಮಾಡುವುದು ಯಾರಿಗೂ ಸಹ ಗೌರವ ತರುವಂತಹ ಸಂಗತಿಯಲ್ಲ. ಮೊದಲು ಡಾ:ಆಚಾರ್ಯ ಅವರಿಗೆ ಗೌರವ ಸಲ್ಲಿಸಿದ ನಂತರ ತಾವು ಬೇರೆ ಯಾವುದೇ ವಿಷಯದ ಬಗ್ಗೆ ಪ್ರಸ್ತಾಪ ಮಾಡಬಹುದಾಗಿದೆ. ಸಂತಾಪ ಸೂಚನೆಯ ಪ್ರಸ್ತಾವನೆಗೆ ಮೊದಲೇ ಈ ರೀತಿಯ ರಾಜಕೀಯವೇ?

(ಗೊಂದಲ)

**ಸಭಾಪತಿಯವರು :-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ

(ಗೊಂದಲ)

**ಡಾ:ಎ.ಹೆಚ್.ಶಿವಯೋಗಿಸ್ವಾಮಿ:-** ಸಂತಾಪ ಸೂಚನೆಯ ಸಂದರ್ಭದಲ್ಲಿ ಕೂಡ ತಾವು ಈ ರೀತಿ ರಾಜಕೀಯ ಮಾಡುವುದು ಖಂಡಿತ ಸರಿಯಲ್ಲ. ದಯಮಾಡಿ ಮೊದಲು ಸಂತಾಪ ಸೂಚನೆ ಮುಗಿಯಲಿ, ಡಾ:ವಿ.ಎಸ್.ಆಚಾರ್ಯ ಅವರು ನಮ್ಮ ಸದನದ ಹಿರಿಯ ನಾಯಕರಾಗಿದ್ದರು. ದಯಮಾಡಿ ಇವೊತ್ತಿನ ಅಜೆಂಡಾ ಪ್ರಕಾರ ಕಲಾಪ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ,

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ಡಾ:ವಿ.ಎಸ್.ಆಚಾರ್ಯ ಅವರ ಬಗ್ಗೆ ಮಾತನಾಡುವಂತಹ ಯೋಗ್ಯತೆಯನ್ನು

ಆಡಳಿತ ಪಕ್ಷದವರು ಕಳೆದುಕೊಂಡಿದ್ದಾರೆ. ಅವರಿಗೆ ಗೌರವ ತೋರುವ ವಿಚಾರದಲ್ಲಿ ನಾವು ಯಾರೂ ವಿರೋಧವನ್ನು ವ್ಯಕ್ತಪಡಿಸುತ್ತಿಲ್ಲ, ಮಾನ್ಯ ಆಚಾರ್ಯ ಅವರ ಬಗ್ಗೆ ನಮಗೆ ಹೆಚ್ಚು ಗೌರವವಿದೆ. ಆಡಳಿತ ಪಕ್ಷದವರು ಅವರ ಬಗ್ಗೆ ಮಾತನಾಡುವ ಯೋಗ್ಯತೆಯನ್ನೇ ಕಳೆದುಕೊಂಡಿದ್ದಾರೆ.

(ಗೊಂದಲ)

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

**ಡಾ:ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೇ, ಮೊದಲು ಸಂತಾಪ ಸೂಚನೆ ಮುಗಿಯಲಿ, ನಂತರ ಬೇರೆ ವಿಷಯಗಳ ಬಗ್ಗೆ ಮಾತನಾಡಬಹುದು. ಡಾ:ಆಚಾರ್ಯ ಅವರಿಗೆ ಅಗೌರವವನ್ನು ತೋರುವುದು ಸರಿಯಲ್ಲ.

(ಗೊಂದಲ)

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ

(ಗೊಂದಲ)

**ಶ್ರೀ.ಎಸ್.ಆರ್.ಪಾಟೀಲ್:-** ನಿಮ್ಮ ಪಕ್ಷದಲ್ಲಿನ ಗಲಾಟೆ, ಗೊಂದಲಗಳು ಡಾ:ಆಚಾರ್ಯ ಅವರ ಆರೋಗ್ಯದ ಮೇಲೆ ಪರಿಣಾಮ ಬೀರಿ ಅವರು ಈ ರೀತಿ ಹಠಾತ್ತನೆ ನಿರ್ಗಮಿಸಿದರು ಎಂದು ಹೇಳಬೇಕಾಗುತ್ತದೆ.

**ಶ್ರೀ ಡಿ.ವಿ.ಸದಾನಂದಗೌಡ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಯಾವುದೇ ನಿಯಮಾನುಸಾರವಾಗಿ ಅವರು ಈ ವಿಚಾರಗಳನ್ನು ಚರ್ಚೆಗೆ ತರುವುದಿದ್ದರೆ ಆ ಚರ್ಚೆಗೆ ಉತ್ತರ ಕೊಡುವುದಕ್ಕೆ ನಾನು ಸಿದ್ಧನಿದ್ದೇನೆ. ಆದರೆ ಕಲಾಪಗಳನ್ನು ನಿಯಮಾನುಸಾರ ನಡೆಸುವಂಥದ್ದು ಸೂಕ್ತವಲ್ಲವೇ? ಇವೊತ್ತಿನ ಕಾರ್ಯಕಲಾಪಗಳ ಪಟ್ಟಿಯ ಪ್ರಕಾರ ಡಾ: ವಿ. ಎಸ್.ಆಚಾರ್ಯ ಅವರ ನಿಧನದ ವಿಷಯವಾಗಿ ಸಂತಾಪ

ಸೂಚನೆಯನ್ನು ಅರ್ಪಿಸಬೇಕಾಗಿದೆ. ಬೇರೆ ವಿಚಾರಗಳಿದ್ದರೆ ಅವುಗಳನ್ನು ಅವರು ನಿಯಮಾನುಸಾರವಾಗಿ ತರಲಿ ನಾನು ಈ ಸದನದಲ್ಲಿ ಚರ್ಚೆಗೆ ಸಿದ್ಧನಿದ್ದೇನೆ, ಓಡಿ ಹೋಗುವಂತಹ ಪ್ರಮೇಯವೇ ಇಲ್ಲ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇವೊತ್ತು ಸದನದಲ್ಲಿ ಎಷ್ಟು ಜನ ಮಂತ್ರಿಗಳಿರಬೇಕಾಗಿತ್ತಲ್ಲವೆ, ಅವರೆಲ್ಲಾ ಎಲ್ಲಿಗೆ ಹೋಗಿದ್ದಾರೆ? ಹಾಗಾದರೆ ಅವರಿಗೆ ಡಾ:ಆಚಾರ್ಯ ಅವರ ಬಗ್ಗೆ ಗೌರವ ಇಲ್ಲವೆ? ಅವರು ಎಲ್ಲಿದ್ದಾರೆ ಎಂಬುದನ್ನು ದಯಮಾಡಿ ಮೊದಲು ಹುಡುಕಿರಿ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಸಭಾಪತಿಯವರೇ, ಸದನ ಪ್ರಾರಂಭಿಸಲು ನಿಯಮಾನುಸಾರ ಕೋರಂ ಎಷ್ಟಿರಬೇಕೋ ಅಷ್ಟಿದ್ದೇವೆ. ಅವರನ್ನು ಹುಡುಕುವಂತಹ ಪ್ರಶ್ನೆಯೇ ಇಲ್ಲ. ಅನೇಕರು ವಿಧಾನ ಸಭೆಯಲ್ಲಿದ್ದಾರೆ.

(ಗೊಂದಲ)

**ಶ್ರೀಮತಿ ಮೋಟಮ್ಮ:-** ಇಲ್ಲಿ ಕೋರಂ ಪ್ರಶ್ನೆ ಇಲ್ಲ, ಅವರಿಗೆ ನಿಮ್ಮ ನಾಯಕರ ಬಗ್ಗೆ ಗೌರವ ಇಲ್ಲವೇ? ಉಳಿದವರು ಎಲ್ಲಿಗೆ ಹೋಗಿದ್ದಾರೆ? ಅವರು ರೆಸಾರ್ಟ್‌ನಲ್ಲಿದ್ದಾರೆಯೋ ಅಥವಾ ವಿಧಾನಸೌಧದಲ್ಲಿಯೇ ಇದ್ದಾರೆಯೋ, ಅವರು ಏನು ಕೆಲಸ ಮಾಡುತ್ತಿದ್ದಾರೆ ಎಂಬುದು ಬೇಕು.

(ಗೊಂದಲ)

**ಡಾ: ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೆಲವರು ವಿಧಾನ ಸಭೆಯಲ್ಲಿದ್ದಾರೆ, ಕೆಲವರು ಕಾರ್ಯನಿಮಿತ್ತವಾಗಿ ಬರದೆ ಇರುವವರು ಸಹ ಇದ್ದಾರೆ. ವಿರೋಧ ಪಕ್ಷದ ಸದಸ್ಯರಲ್ಲಿ ಅನೇಕರು ಇವೊತ್ತಿನ ದಿವಸ ಸದನಕ್ಕೆ ಹಾಜರಾಗಿಲ್ಲ, ಹಾಗೆಂದು ನಾವು ಆ ವಿಚಾರದ

ಬಗ್ಗೆ ಚರ್ಚೆ ಮಾಡುವುದಕ್ಕಾಗುವುದಿಲ್ಲ. ನಿಯಮಾನುಸಾರವಾಗಿ ಸಭೆ ಸೇರಲು ಕೋರಂ ಎಷ್ಟಿರಬೇಕೋ ಅಷ್ಟಿದ್ದೇವೆ

(ಗೊಂದಲ)

**ಸಭಾಪತಿಯವರು:–** ಈಗ ಸದನದಲ್ಲಿ ಸಂತಾಪ ಸೂಚಕ ನಿರ್ಣಯದ ಬಗ್ಗೆ ಮಾತನಾಡೋಣ. ಮಾನ್ಯ ವಿರೋಧ ಪಕ್ಷದ ನಾಯಕರೇ, ನಿಮಗೆ ಮಾತನಾಡಲು ಅವಕಾಶವಿಲ್ಲ ಎಂದು ನಾನು ಹೇಳುವುದಿಲ್ಲ, ಆದರೆ ತಾವು ಆದಷ್ಟು ಬೇಗನೆ ಮಾತನಾಡಿ ಮುಗಿಸಿ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ನೋಟಿಫಿಕೇಷನ್ ಏಕೆ ತಡವಾಗಿ ಬಂತು ಎನ್ನುವಂತಹ ವಿಚಾರವನ್ನು ಸಹ ತಾವು ಪ್ರಸ್ತಾಪ ಮಾಡಿದ್ದೇವೆ. ಅಂದರೆ ಇದರಲ್ಲಿ ನಮ್ಮ ಸಂಕಟ ಕೂಡ ಅಡಗಿದೆ ಎನ್ನುವಂತಹ ವಿಚಾರವನ್ನು ಸಹ ತಿಳಿಸಿದ್ದೇವೆ.

**ಸಭಾಪತಿಯವರು:–** ಆಯಿತು . ಈಗ ನಾನು ಹೇಳುವುದನ್ನು ಕೂಡ ತಾವು ಸ್ವಲ್ಪ ಕೇಳಬೇಕು. Notice ಕೊಡಲಿಲ್ಲ ಎನ್ನುವಂತಹ ವಿಚಾರವನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಸಾಮಾನ್ಯವಾಗಿ ಪದ್ದತಿ ಏನಿದೆ ಎಂಬುದು ಗೌರವಾನ್ವಿತ ಸದಸ್ಯರಿಗೆಲ್ಲಾ ಗೊತ್ತಾಗಬೇಕು. ನಮ್ಮಲ್ಲಿ ಪದ್ಧತಿ ಇರುವುದು ಹೇಗೆಂದರೆ ಯಾವುದೇ ಒಂದು ಸದನ ಕರೆಯುವಾಗ ಸರ್ಕಾರದಿಂದ ನಮ್ಮ ಕಚೇರಿಗೆ ಸೂಚನೆ ಬಂದ ತಕ್ಷಣ ಇದು prorogue ಆಗಿದ್ದ ಕಾರಣಕ್ಕಾಗಿ ಸರ್ಕಾರದಿಂದ ಘನತೆವೆತ್ತ ರಾಜ್ಯಪಾಲರಿಗೆ ಹೋಗಿ ಅವರಿಂದ ಸರ್ಕಾರಕ್ಕೆ ಬಂದು, ಸರ್ಕಾರದಿಂದ ನಮಗೆ ಸೂಚನೆ ಏನು ಬರಬೇಕಾಗಿತ್ತು ಆದು ಒಂದೇ ದಿವಸದಲ್ಲಿ ಬಂತು. ಆದು ಬಂದ ತಕ್ಷಣ ನನ್ನ ಕಚೇರಿಯಿಂದ ಎಲ್ಲರಿಗೂ ತಿಳಿಸುವಂತಹ ಕೆಲಸವನ್ನು ನಾವು ಮಾಡಿದ್ದೇವೆ. ಅಲ್ಲದೆ ನಾನು ನಮ್ಮ ರೂಲ್ಸ್ ಆಫ್ ಪ್ರೊಸೀಜರ್ ಎಲ್ಲಾ ತೆಗೆದು ನೋಡಿದಾಗ emergent notice ಕೊಡುವುದಕ್ಕೆ ನಮ್ಮಲ್ಲಿ ಅವಕಾಶ ಇತ್ತು, ಹಾಗಾಗಿ ಅದನ್ನು

ಕೊಟ್ಟಿದ್ದೇವೆ ಮತ್ತು ಪ್ರಶ್ನೋತ್ತರ ಅವಧಿಗೂ ಅವಕಾಶವನ್ನು ಕೊಟ್ಟಿದ್ದೇವೆ, ಪ್ರಶ್ನೋತ್ತರ ಅವಧಿಗೆ ಪ್ರಶ್ನೆಗಳನ್ನು call for ಮಾಡಿದ್ದೇವೆ.

(ಗೊಂದಲ)

**ಶ್ರೀ ಆರ್.ವಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ತಾವು ಈ ರೀತಿ ಹೇಳುತ್ತಿದ್ದೀರಿ, ಮೊನ್ನೆ ಶನಿವಾರಕ್ಕೆ question dates ಮುಗಿಸಿದೆ, ಆದರೆ ಇವೊತ್ತಿಗೂ ಕೂಡ ಇನ್ನೂ ಬಂದಿಲ್ಲ.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ತಮಗೆ emergent session ಕರೆಯುವುದಕ್ಕೆ ಕಾನೂನಿನ ಪ್ರಕಾರ ಅವಕಾಶ ಇದೆ.

**ಶ್ರೀ ಆರ್.ವಿ.ವೆಂಕಟೇಶ್:–** ಪ್ರಶ್ನೆ ಕೇಳುವುದಕ್ಕೆ ಹೇಳಿದ್ದೀರಿ, ಆದರೆ ಪ್ರಶ್ನೆ ಕೇಳುವುದಕ್ಕೆ ಅವಕಾಶವೇ ಮುಗಿದುಹೋಗಿದೆ. ಏಕೆಂದರೆ ಪ್ರಶ್ನೆಗಳನ್ನು ಕಳುಹಿಸಿಕೊಡಲು ಶನಿವಾರವೇ ಕೊನೆಯ ದಿನವಾಗಿತ್ತು.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ತಮಗೆ emergent session ಕರೆಯಲಿಕ್ಕೆ ಎಲ್ಲ ರೀತಿಯ ಅವಕಾಶಗಳಿವೆ. But, Budget Session is not an emergent. You may know that sir, ನಾನು ತಮಗೆ ಅತ್ಯಂತ ಗೌರವಯುತವಾಗಿ ಈ ಮಾತನ್ನು ಹೇಳುತ್ತಿದ್ದೇನೆ, ಸರ್ಕಾರ ಕೂಡ ಈ ವಿಚಾರವನ್ನು ತಿಳಿದುಕೊಳ್ಳಬೇಕು. ಸರ್ಕಾರ ಕಲಾಪಗಳನ್ನು ಕಳುಹಿಸಿದ ಮೇಲೆಯೇ ಸಭಾಪತಿಗಳಾಗಲಿ, ಸಭಾಧ್ಯಕ್ಷರಾಗಲಿ ಈ ಅಧಿವೇಶನಗಳನ್ನು ಕರೆಯಲಿಕ್ಕೆ ಅವಕಾಶವಿದೆ. ಅವರು ಕಲಾಪಗಳನ್ನು ಕೊಡಬೇಕಾಗುತ್ತದೆ. ಆ ವಿಚಾರವನ್ನು ನಾನು ಸಹ ಒಪ್ಪುತ್ತೇನೆ. ಇಲ್ಲಿ ಸಭಾಪತಿಗಳದ್ದಾಗಲಿ, ಸಭಾಪತಿಗಳ ಕಾರ್ಯಾಲಯದ್ದಾಗಲಿ ಏನೂ ತಪ್ಪಿಲ್ಲ. ಈ Budget Session ಏನಿದೆ ಇದು ಬಹಳ ಅಮೂಲ್ಯವಾದದ್ದು, ಅದು emergency ಅಲ್ಲ, ವಾಡಿಕೆಯಂತೆ ನಿಶ್ಚಿತವಾದ ತಿಂಗಳಿನಲ್ಲಿ ಕರೆಯಲಾಗುತ್ತದೆ. ಅದು Constitutional Commitment. ಅದಕ್ಕೆ ಇದನ್ನು ಈ ರೀತಿ

ಯಾವುದೋ ಒಂದು ರೀತಿಯಲ್ಲಿ, ನಮಗೆ emergent session ಕರೆಯಲಿಕ್ಕೆ ಅವಕಾಶ ಇದೆ ಎಂದು ಹೇಳಿ ಈ ರೀತಿ ಮಾಡುವುದು ಅಂದರೆ, it is nothing but we are 'finishing democracy" ನಮ್ಮ ಸಂವಿಧಾನದ ವ್ಯವಹಾರಗಳೇನಿವೆ. ನಾವೇ ರಚಿಸಿಕೊಂಡಂತಹ ಈ ಕಾನೂನುಗಳೇನಿವೆ ಇವೆಲ್ಲವುಗಳ ಮೇಲೆ ಆಘಾತಕರವಾದಂತಹ ಪ್ರಹಾರವನ್ನು ಮಾಡುತ್ತಿದ್ದೇವೆಯೇನೊ ಅನಿಸುತ್ತಿದೆ. ಇದು ಒಳ್ಳೆಯ ಪರಂಪರೆಯಲ್ಲ. ಇವೊತ್ತು ನೀವಿರಬಹುದು, ನಾಳೆ ನಾವು ಬರಬಹುದು. ನಾವಿಬ್ಬರೂ ಇಲ್ಲದೆ ನಾಳೆ ಮತ್ತೊಬ್ಬರು ಬರಬಹುದು. ಆದರೆ ನಾವಿದ್ದಾಗ ಆ ಮೌಲ್ಯಗಳನ್ನು ಎತ್ತಿ ಹಿಡಿಯಬೇಕು. ಈ ಸಂವಿಧಾನ ಹಾಗೂ ಈ ಕಾನೂನಿನ ಬದ್ಧತೆಯಲ್ಲಿ ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿಗಳಾಗಿ ಸರ್ಕಾರವನ್ನು ನಡೆಸುತ್ತಿದ್ದಾರೆ. ಈ ಹಂತದಲ್ಲಿ ಇವುಗಳಿಗೆ ಅಪಚಾರ ಆಗುತ್ತಿದ್ದರೆ ಅದಕ್ಕೆ ಯಾರೂ ಬೆಂಬಲ ಕೊಡಬಾರದು. ದಯಮಾಡಿ ಈ ರೀತಿ ಇನ್ನೊಮ್ಮೆ ಆಗಬಾರದು. ಈಗ ಏನಾಗಿದೆ ಇದು ಬಹಳ ನೋವಿನ ಸಂಗತಿ. ನನ್ನ ವಿನಂತಿ ಏನೆಂದರೆ, ನಾನು ಈ ವಿಚಾರದಲ್ಲಿ ರಾಜಕೀಯವನ್ನು ಬೆರೆಸುತ್ತಿಲ್ಲ, ಮತ್ತೊಮ್ಮೆ ಈ ರೀತಿ ಆಗದಂತೆ ಸರ್ಕಾರ ಎಚ್ಚರಿಕೆ ವಹಿಸಬೇಕೆಂಬುದು ನನ್ನ ಆಗ್ರಹಪೂರ್ವಕ ವಿನಂತಿ.

**ಶ್ರೀ ಡಿ. ವಿ. ಸದಾನಂದಗೌಡ (ಮುಖ್ಯಮಂತ್ರಿಯವರು):–** ಮಾನ್ಯ ಸಭಾಪತಿಯವರೇ, ನಿಯಮಾನು ಸಾರ ಎಲ್ಲವನ್ನೂ ಮಾಡುವಂತಹ ಕೆಲಸಕಾರ್ಯಗಳನ್ನು ಸರ್ಕಾರ ಮಾಡಿದೆ. ಅದರ ಬಗ್ಗೆ ಎರಡು ಮಾತಿಲ್ಲ. ಎರಡು–ಮೂರು ಕಾರಣಗಳಿಂದಾಗಿ ಈ ವಿಚಾರದಲ್ಲಿ ಸ್ವಲ್ಪಮಟ್ಟಿಗೆ ವಿಳಂಬವಾಗಿರುವುದು ಸಹಜ. ಒಂದು ಕಾರಣವೇನೆಂದರೆ, ಲೋಕಸಭೆಯ ಬಡ್ಜೆಟ್ ಮಂಡನೆಯಾದ ಮೇಲೆ ನಮ್ಮ ರಾಜ್ಯದ ಬಡ್ಜೆಟ್ ಮಂಡನೆ ಮಾಡಬೇಕೆನ್ನುವಂತಹ ನಮ್ಮ ಆಡಳಿತ ಪಕ್ಷದ ತೀರ್ಮಾನದ ಹಿನ್ನೆಲೆಯಲ್ಲಿ ಲೋಕಸಭೆಯಲ್ಲಿ ಮೊನ್ನೆ ಬಡ್ಜೆಟ್ ಮಂಡನೆಯಾದ ನಂತರ ಇಲ್ಲಿ ಬಡ್ಜೆಟ್ ಮಂಡನೆ ಮಾಡಲು ತೀರ್ಮಾನಿಸಲಾಯಿತು. ಇದು ಒಂದು ವಿಚಾರ. ಎರಡನೆಯದಾಗಿ ಈ ಮಧ್ಯದಲ್ಲಿ ಇದೇ 18ನೇ ತಾರೀಖಿನಂದು ನಮ್ಮ

ಲೋಕಸಭಾ ಚುನಾವಣೆ, ಅದರಲ್ಲಿಯೂ ಕೂಡ ನಾನೇ ಪ್ರತಿನಿಧಿಸುತ್ತಿದ್ದಂತಹ ಲೋಕಸಭಾ ಚುನಾವಣೆ ಬಂದಿರುವಂಥದ್ದು ಇದು ಎರಡನೆಯ ವಿಚಾರ. ಇನ್ನು ಮೂರನೆಯದಾಗಿ ನಾವು ಕಾನೂನಿನ ಚೌಕಟ್ಟಿನೊಳಗೆ, ಸದನದ ನಮ್ಮ ಕಾರ್ಯಕಲಾಪಗಳ ನಿಯಮಾವಳಿಗಳ ಇತಿಮಿತಿಯೊಳಗೆ ಏನು ಮಾಡಬೇಕೋ ಅದನ್ನು ಮಾಡುವಂಥದ್ದು, ಈ ಮೂರನ್ನೂ ಮಾಡಿದ್ದೇವೆ. ಪ್ರಶ್ನೋತ್ತರ ಅವಧಿಗೆ ಬೇಕಾದಂತಹ ದಿನಾಂಕಗಳನ್ನು ನಿಗದಿಪಡಿಸುವಂತಹ ಕೆಲಸವನ್ನು ಸಹ ಮಾಡಿದ್ದೇವೆ. ಇದನ್ನು ಇನ್ನಷ್ಟು ಬೇಗನೆ ಕೊಟ್ಟಿದ್ದರೆ ಒಳ್ಳೆಯದಿತ್ತು ಎನ್ನುವಂತಹ ಭಾವನೆಗಳನ್ನು ಮಾನ್ಯ ಹಿರಿಯ ಸದಸ್ಯರು ವ್ಯಕ್ತಪಡಿಸಿದ್ದಾರೆ, ಖಂಡಿತವಾಗಿಯೂ ಮುಂದೆ ಆ ರೀತಿ ಆಗದಂತೆ ನೋಡಿಕೊಳ್ಳುತ್ತೇವೆ.

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:-** ಈಗ ಸಂತಾಪ ಸೂಚನೆಗಳನ್ನು ಮುಗಿಸಿಬಿಡೋಣ. ಬೇಕಾದರೆ ಈ ಚರ್ಚೆಗೆ ಬೇರೆ ಒಂದು ನೋಟೀಸ್ ಕೊಡಿ, ನಾನು ಕಾಲವನ್ನು ನಿಗಧಿಪಡಿಸುತ್ತೇನೆ, ಚರ್ಚೆ ಮಾಡೋಣ, ಅದರಲ್ಲಿ ತಪ್ಪೇನೂ ಇಲ್ಲ. ನಿಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ನಾನು ಅವಕಾಶವನ್ನೇ ಕೊಡುವುದಿಲ್ಲ ಎಂದರೆ ಅದು ಸರಿಯಾಗುವುದಿಲ್ಲ. ಗೌರವಾನ್ವಿತ ಸದಸ್ಯರು ತಮ್ಮ ಭಾವನೆಗಳನ್ನು, ಅಭಿಪ್ರಾಯಗಳನ್ನು ತಮ್ಮದೇ ಆದ ರೀತಿಯಲ್ಲಿ ನೋಟಿಸ್ ಕೊಡಿ, ಅದರ ಮೇಲೆ ಚರ್ಚೆ ಮಾಡೋಣ. ಅದರಲ್ಲಿ ತಪ್ಪೇನೂ ಇಲ್ಲ. ನಾನು ಅದಕ್ಕೆ ಒಂದು ಅವಕಾಶ ಕೊಡುತ್ತೇನೆ.

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೇ,

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಏನು ವಿಚಾರವನ್ನು ಪ್ರಸ್ತಾಪ ಮಾಡಿದರು ಅದನ್ನು ಎಲ್ಲರೂ ಕೇಳಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಸಹ ಕೊಟ್ಟಿದ್ದಾರೆ. ಮತ್ತೆ ಹೀಗೆಯೇ ಎಲ್ಲರೂ ಎದ್ದುನಿಂತು ವಿಷಯವನ್ನು ಪ್ರಸ್ತಾಪ ಮಾಡುವುದು, ಮತ್ತೆ ಅದರ ಮೇಲೆಯೇ ಚರ್ಚೆ ಮಾಡಿಕೊಂಡು

ಹೋಗುವುದರೊಳಗೆ ಯಾವುದೇ ರೀತಿಯಾದಂತಹ ವಿಶೇಷತೆ ಇಲ್ಲ. ಹಾಗಾಗಿ ತಾವು ಕಾರ್ಯಕಲಾಪವನ್ನು ಇವೊತ್ತಿನ ವೇಳಾಪಟ್ಟಿಯಲ್ಲಿ ನಿಗದಿಪಡಿಸಿರುವಂತೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನನ್ನ ವಿನಂತಿ ಏನೆಂದರೆ ಬೇರೆ ಯಾವುದಾದರೂ ಸಂದರ್ಭದಲ್ಲಿ ಬೇರೆ ರೂಪದಲ್ಲಿ ಈ ಚರ್ಚೆಗೆ ಅವಕಾಶ ತೆಗೆದುಕೊಳ್ಳಬಹುದಾಗಿದೆ.

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೇ, ಇಷ್ಟು ಹೊತ್ತಿನವರೆಗೆ ಎಲ್ಲರೂ ಮಾತನಾಡಿದ್ದಾರೆ, ನಾನು ನಾಲ್ಕು ಮಾತುಗಳನ್ನಾಡ ಬಾರದೇ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಸಭಾಪತಿಯವರೇ, ಮತ್ತೆ ಮತ್ತೆ ಅದೇ ವಿಷಯಕ್ಕೆ ಹೋಗಿ, ಮತ್ತೆ ಅದೇ ಗೊಂದಲ, ಅದೇ ವಿವಾದಕ್ಕೆ ಹೋದರೆ...

**ಸಭಾಪತಿಯವರು:-** ಮಾನ್ಯ ಸುದರ್ಶನ್‌ರವರೇ, ತಾವು ಬೇಗನೆ ಮಾತನಾಡಿ ಮುಗಿಸಿ.

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರಿಗೆ ತಾವು ಕುಳಿತುಕೊಳ್ಳುವುದಕ್ಕೆ ತಿಳಿಸಿ.

**ಸಭಾಪತಿಯವರು:-** ನೀವು ಎದ್ದುನಿಲ್ಲಿ. ಅವರು ಕುಳಿತುಕೊಳ್ಳುತ್ತಾರೆ. ಹಾಗಾದರೆ ನಾವೀಗ ಸಂತಾಪ ಸೂಚನೆಯ ವಿಷಯವನ್ನು ತಗೆದುಕೊಳ್ಳೋಣ. ಆಮೇಲೆ ತಾವೂ ನೋಟಿಸ್ ಕೊಡಿ.ಈ ವಿಷಯವನ್ನು ಚರ್ಚಿಸಲು ನಾನು immediate ಆಗಿ earliest chance ಕೊಡುತ್ತೇನೆ available earliest chance ಕೊಡುತ್ತೇನೆ. ಈಗ ಸಂತಾಪ ಸೂಚನೆಯ ವಿಷಯವನ್ನು ತೆಗೆದುಕೊಳ್ಳೋಣ.

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೇ, ಈಗ ನಾವು ಹೇಳುತ್ತಿರುವುದೇನು? ಪ್ರಶ್ನೆಗಳನ್ನು ಕಳುಹಿಸಿಕೊಡುವುದಕ್ಕೆ ಕನಿಷ್ಠ ಪಕ್ಷ 10 ದಿವಸಗಳ ಮೊದಲೇ ನೋಟಿಸ್ ಕಳುಹಿಸಿಕೊಡಬಹುದಾಗಿತ್ತು. ಈಗ ಕೇಂದ್ರ

ಸರ್ಕಾರದ ಬಡ್ಜೆಟ್ ಇದೆ ಎಂದು ಹೇಳಿದರೆ, ನೋಟಿಸ್ ಕಳುಹಿಸಿ ಕೊಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇತ್ತು?

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಚರ್ಚೆಯಾಗಿ, ಉತ್ತರ ಕೊಟ್ಟು ಎಲ್ಲಾ ಮುಗಿದ ಮೇಲೆಯೂ ಮತ್ತೆ ಅದನ್ನೇ ಎಳೆದುಕೊಂಡು ಹೋಗುವುದರಲ್ಲಿ ಅರ್ಥವಿಲ್ಲ.

(ಗೊಂದಲ)

**ಸಭಾಪತಿಯವರು:–** ಕ್ಯಾಲೆಂಡರ್ ಅನೌನ್ಸ್ ಮಾಡಿದ್ದೇವೆ.

(ಗೊಂದಲ)

**ಶ್ರೀ ವಿ.ಆರ್.ಸುದರ್ಶನ್:–** ಮಾನ್ಯ ಸಭಾಪತಿಯವರೇ, ಇದು ಸರ್ಕಾರದ ಒಂದು ಜವಾಬ್ದಾರಿಯುತವಾದ ಪ್ರಶ್ನೆ. ಇದು ಸಂಸದೀಯ ವ್ಯವಸ್ಥೆಯಲ್ಲಿನ ನಿಯಮಗಳ ಪ್ರಶ್ನೆ. ಇಲ್ಲಿ ಒಂದು ಸಂಪ್ರದಾಯದ ಪ್ರಶ್ನೆ ಕೂಡ ಬರುತ್ತದೆ.

(ಗೊಂದಲ)

**ಸಭಾಪತಿಯವರು:–** ಆಯಿತು, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ವಿಷಯವನ್ನು ಒಮ್ಮೆ ಪ್ರಸ್ತಾಪ ಮಾಡಿದ ಮೇಲೆ, ಆ ವಿಷಯ ಒಮ್ಮೆ ಪ್ರಸ್ತಾಪವಾಗಿ ಮುಗಿದ ಮೇಲೆ ಮತ್ತೆ ಅದೇ ವಿಷಯದ ಬಗ್ಗೆ ಪ್ರಸ್ತಾಪ ಮಾಡುವುದು ಎಷ್ಟರಮಟ್ಟಿಗೆ ಸರಿಯಾಗುತ್ತದೆ?

(ಗೊಂದಲ)

**ಶ್ರೀ ವಿ.ಆರ್.ಸುದರ್ಶನ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರೇಕೆ ಮತ್ತೆ ಮತ್ತೆ ಎದ್ದುನಿಂತು ಮಾತನಾಡುತ್ತಿದ್ದಾರೆ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಸಂತಾಪ ಸೂಚನೆಯ ವಿಷಯವನ್ನು ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಸಭಾಪತಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ

**ಸಭಾಪತಿಯವರು:-** ಈಗ ಸಂತಾಪ ಸೂಚನೆಗೆ ಹೋಗೋಣ. ಇದು ಬಹಳ ಗಂಭೀರವಾಗಿರತಕ್ಕಂತಹ ಒಂದು ಸಂಗತಿ.

## 3. ಸಂತಾಪ ಸೂಚನೆಗಳು

### ಶ್ರೀಯುತರುಗಳಾದ ಡಾ:ವಿ.ಎಸ್.ಆಚಾರ್ಯ ಹಾಗೂ ಶ್ರೀ ಎಂ.ಮುಕುಂದ ಅವರುಗಳ ನಿಧನದ ಬಗ್ಗೆ

**ಸಭಾಪತಿಯವರು:-** ರಾಜ್ಯ ಕಂಡ ಅಜಾತ ಶತ್ರು, ಧೀಮಂತ ರಾಜಕಾರಣಿ ಡಾ: ವೇದವಾಸ್ಯ ಶ್ರೀನಿವಾಸ ಆಚಾರ್ಯ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀ ಎಂ.ಮುಕುಂದ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

### ಡಾ: ವೇದವ್ಯಾಸ ಶ್ರೀನಿವಾಸ ಆಚಾರ್ಯ

ಕರ್ನಾಟಕ ಭಾರತೀಯ ಜನತಾ ಪಕ್ಷದ ಹಿರಿಯ ನಾಯಕರು ಒಂದು ರೀತಿಯಲ್ಲಿ ಅರ್ಥಶಾಸ್ತ್ರಜ್ಞ, ಶಿಕ್ಷಣ ತಜ್ಞ, ಪತ್ರಿಕೋದ್ಯಮಿ, ಸಾಹಿತಿ, ರಾಜತಾಂತ್ರಿಕ ಹಾಗೂ ವೃತ್ತಿಯಲ್ಲಿ ವೈದ್ಯ ಹೀಗೆ ಹತ್ತು ಹಲವಾರು ವಿಷಯಗಳಲ್ಲಿ ಅಗಾಧ ಪಾಂಡಿತ್ಯ ಹೊಂದಿ ಈ ಮನೆಯ ಸಭಾ ನಾಯಕರಾಗಿ ನಮ್ಮೆಲ್ಲರಿಗೂ ಮಾರ್ಗದರ್ಶನ ಮಾಡುತ್ತಿದ್ದ ಮೌಲ್ಯಾಧಾರಿತ ರಾಜಕಾರಣಿ ಎಂದೇ ಹೆಸರಾಗಿದ್ದ ಡಾ:ವೇದವ್ಯಾಸ ಶ್ರೀನಿವಾಸ ಆಚಾರ್ಯ ಅವರು ದಿನಾಂಕ : 14ನೇ ಫೆಬ್ರವರಿ, 2012ರಂದು ನಿಧನ ಹೊಂದಿರುತ್ತಾರೆ.

1939ರ ಜುಲೈ 06ರಂದು ಉಡುಪಿಯಲ್ಲಿ ಜನಿಸಿದ ಶ್ರೀಯುತರು ಎಂ.ಬಿ.ಬಿ.ಎಸ್. ಪದವೀಧರರಾಗಿದ್ದು ವೃತ್ತಿಯಲ್ಲಿ ವೈದ್ಯರಾಗಿದ್ದರು. ಪಂಡಿತ್ ದೀನದಯಾಳ್ ಉಪಾಧ್ಯಾಯರಿಂದ ಪ್ರೇರಣೆಗೊಂಡು ತಮ್ಮ 28ನೇ ವಯಸ್ಸಿನಲ್ಲೇ ಭಾರತೀಯ ಜನ ಸಂಘದ ಮೂಲಕ ಉಡುಪಿ ಪುರಸಭೆಗೆ ಸದಸ್ಯರಾಗುವ ಮೂಲಕ ರಾಜಕೀಯಕ್ಕೆ ಪ್ರವೇಶಿಸಿದ ಇವರು ಪುರಸಭೆ ಅಧ್ಯಕ್ಷರಾಗಿ ಉಡುಪಿ ನಗರಕ್ಕೆ ನೀರು ಪೂರೈಸುವ ಸುವರ್ಣ ನದಿ ಯೋಜನೆಯನ್ನು ಜಾರಿಗೊಳಿಸಿದರು. ಪುನಃ 1973ರಲ್ಲಿ 2ನೇ ಬಾರಿಗೆ ಪುರಸಭೆ ಅಧ್ಯಕ್ಷರಾಗಿ ಆಯ್ಕೆಯಾಗಿ ದೇಶದಲ್ಲಿಯೇ ಪ್ರಥಮ ಬಾರಿಗೆ ತಲೆ ಮೇಲೆ ಮಲ ಹೊರುವ ಪದ್ಧತಿಯನ್ನು ನಿಷೇಧಿಸಿದ ಕೀರ್ತಿ ಇವರದ್ದಾಗಿದೆ. ನೂತನ ನಗರಾಡಳಿತ ಕಛೇರಿ, ಒಳಚರಂಡಿ ವ್ಯವಸ್ಥೆ, ಉಡುಪಿ ನಗರದಲ್ಲಿ ಸುಧಾರಿತ ರಸ್ತೆಗಳು, ನಗರ ಸುಧಾರಣಾ ಮಂಡಳಿ ಮುಂತಾದವುಗಳನ್ನು ತಮ್ಮ ಕಾರ್ಯಾವಧಿಯಲ್ಲಿ ಜಾರಿಗೆ ತಂದರು. ತುರ್ತು ಪರಿಸ್ಥಿತಿ ಸಮಯದಲ್ಲಿ ಹೋರಾಟ ಮಾಡಿ ಅದಕ್ಕಾಗಿ ಸುಮಾರು 19 ತಿಂಗಳ ಕಾಲ ಕಾರಾಗೃಹ ವಾಸವನ್ನು ಸಹ ಅನುಭವಿಸಿದ್ದರು.

ಶ್ರೀಯುತರು 1974ರಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಜನಸಂಘದ ಅಧ್ಯಕ್ಷರಾಗಿ 1977ರಲ್ಲಿ ಜನತಾ ಪಕ್ಷದ ಮೂಲಕ ಅಧ್ಯಕ್ಷರಾಗಿ, ನಂತರ ಬಿ.ಜೆ.ಪಿ. ಮೂಲಕ ಜಿಲ್ಲಾಧ್ಯಕ್ಷರಾಗಿ 1983ರಲ್ಲಿ ನಡೆದ ಚುನಾವಣೆಯಲ್ಲಿ ಗೆದ್ದು ಬಿ.ಜೆ.ಪಿ ತಂಡದ ಶಾಸಕಾಂಗ ಪಕ್ಷದ ನಾಯಕರಾಗಿ ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ದಿ. ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿ ರಚನೆಯಾದ ಕಾಂಗ್ರೆಸ್ಸೇತರ ಸರ್ಕಾರಕ್ಕೆ ಷರತ್ತು ರಹಿತ ಬಾಹ್ಯ ಬೆಂಬಲವನ್ನು ನೀಡಿದ್ದರು. ಅಲ್ಲದೆ, 1984ರಲ್ಲಿ ಬಿಜೆಪಿಯ ರಾಜ್ಯ ಉಪಾಧ್ಯಕ್ಷರಾಗಿ ಮತ್ತು ರಾಷ್ಟ್ರೀಯ ಬಿ.ಜೆ.ಪಿ. ಕಾರ್ಯಕಾರಿಣಿ ಸಮಿತಿಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿದ್ದಾರೆ.

1983ರಲ್ಲಿ ಉಡುಪಿ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಜಿಲ್ಲಾ ರಚನಾ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. 1996–2002, 2002–2008 ಮತ್ತು 2008–2014ರ ಅವಧಿಗೆ ಸತತ ಮೂರು ಬಾರಿ

ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಶ್ರೀಯುತರು ವೈದ್ಯಕೀಯ ಶಿಕ್ಷಣ, ಪಶು ಸಂಗೋಪನೆ, ಗೃಹ, ಮುಜರಾಯಿ, ಉನ್ನತ ಶಿಕ್ಷಣ. ಸಾಂಖ್ಯಿಕ ಮತ್ತು ಯೋಜನಾ ಇಲಾಖೆ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಗಳ ಸಚಿವರಾಗಿ ಕಾರ್ಯ ನಿರ್ವಹಿಸಿದ್ದು, ಮುತ್ಸದ್ದಿ ರಾಜಕಾರಣಿ ಎಂಬ ಗೌರವಕ್ಕೆ ಪಾತ್ರರಾಗಿದ್ದರು. ಅವರ ರಾಜಕೀಯ ಜೀವನದಲ್ಲಿ ನಿಷ್ಕಳಂಕ ವ್ಯಕ್ತಿಯಾಗಿ ಬಾಳಿದ ಶ್ರೀಯುತರ ಕಾರ್ಯವಿಧಿಗಳಲ್ಲಿ ಪಾರದರ್ಶಕತೆ ಎದ್ದು ಕಾಣಿಸುತ್ತಿತ್ತು. ತಮ್ಮ ನಾಲ್ಕುವರೆ ದಶಕಗಳ ರಾಜಕಾರಣದಲ್ಲಿ ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಸ್ನೇಹಿತರನ್ನು ಹೊಂದುವ ಮೂಲಕ ಅಜಾತ ಶತ್ರು ಎಂದೆನಿಸಿಕೊಂಡಿದ್ದರು. ಇವರ ಸರಳ, ಸಜ್ಜನಿಕೆ ಹಾಗೂ ಕರ್ತವ್ಯ ನಿಷ್ಠೆಯ ರಾಜಕೀಯ ಜೀವನದಲ್ಲಿ ಇತರರಿಗೆ ಮಾರ್ಗದರ್ಶನ ಎಂದರೆ ಅತಿಶಯೋಕ್ತಿಯಲ್ಲ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಮೌಲ್ಯಾಧಾರಿತ ಧೀಮಂತ ರಾಜಕಾರಣಿ, ಹಿರಿಯ ಮುತ್ಸದಿ, ಸಮಾಜ ಸೇವಕ ಹಾಗೂ ಒಬ್ಬ ಅಪರೂಪದ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

## ಶ್ರೀ ಎಂ.ಮುಕುಂದ

ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀ ಎಂ.ಮುಕುಂದ ಅವರು ದಿನಾಂಕ 12.03.2012 ರಂದು ನಿಧನ ಹೊಂದಿರುತ್ತಾರೆ.

1925ರಲ್ಲಿ ಬೆಂಗಳೂರಿನಲ್ಲಿ ಜನಿಸಿದ ಶ್ರೀಯುತರು ಗಾಂಧೀಜಿಯವರ ಪ್ರಭಾವದಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರೀಯ ಪಾತ್ರ ವಹಿಸಿದ್ದರು. ವಿದ್ಯಾರ್ಥಿ ಪರಿಷತ್ ಮತ್ತು ಸೇವಾದಳದೊಡನೆ ನಿಕಟ ಸಂಪರ್ಕ ಇರಿಸಿಕೊಂಡಿದ್ದ ಶ್ರೀಯುತರು ವಯಸ್ಕರ ಶಿಕ್ಷಣ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ ಏಳಿಗೆಗಾಗಿ ಅವಿರತವಾಗಿ ಶ್ರಮಿಸಿದ್ದರು. 1957ರಲ್ಲಿ ವಿಧಾನಸಭಾ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗಿ ಸೇವೆ ಸಲ್ಲಿಸಿದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಒಬ್ಬ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

**ಶ್ರೀ. ಡಿ. ವಿ.ಸದಾನಂದಗೌಡ (ಮುಖ್ಯ ಮಂತ್ರಿಗಳು):–** ಸನ್ಮಾನ ಸಭಾಪತಿಯವರೇ, ಪ್ರಾಯಶಃ ಇಡೀ ರಾಜ್ಯ ಡಾ ವಿ.ಎಸ್.ಆಚಾರ್ಯರವರ ಅಗಲಿಕೆಯಿಂದ ತುಂಬ ನೊಂದಿದೆ ಹಾಗೂ ಅದ್ಭುತ ರಾಜಕಾರಣಿ ಯೊಬ್ಬರನ್ನು ಕಳೆದುಕೊಂಡಿದೆ. ವೈಯಕ್ತಿಕವಾಗಿ ಹಾಗೂ ವಿಶೇಷವಾಗಿ ಹೇಳಬೇಕೆಂದರೆ ಅವರು ನನಗೆ ಗುರುವಿನ ಸಮಾನರು ಹಾಗೂ ನನ್ನ ಮಾರ್ಗದರ್ಶಕರು ಸಹ ಆಗಿದ್ದ ಕಾರಣ ಅವರ ನಿಧನದಿಂದಾಗಿ ನನಗೆ ತುಂಬಲಾರದ ನಷ್ಟ ಉಂಟಾಗಿದೆ. ಸುಮಾರು 70ರ ದಶಕದಲ್ಲಿ ಸನ್ಮಾನ್ಯ ಹುಚ್ಚಮಾಸ್ತಿಗೌಡರು ಆಹಾರ ನಾಗರೀಕ ಸರಬರಾಜು ಇಲಾಖೆಯ ಸಚಿವರಾಗಿದ್ದರು. ಆ ಸಮಯದಲ್ಲಿ ನಾನು ಕಾಲೇಜಿಗೆ ಹೋಗುತ್ತಿದ್ದೆ. ಆಗ ಅಂತರರಾಜ್ಯ ಹಾಗೂ ಅಂತರ್ ಜಿಲ್ಲಾ ಅಕ್ಕಿ ಸಾಗಾಣಿಕೆಗೆ ನಿರ್ಬಂಧವಿತ್ತು. ಹೀಗಾಗಿ ನಮಗೆ ಅದರ ವಿರುದ್ದ ಒಂದು ಹೋರಾಟವನ್ನು ನಮ್ಮ ಪಕ್ಷ ಕೈಗೆತ್ತಿಕೊಂಡಿತ್ತು. ಕೊಡಗಿನಿಂದ ದಕ್ಷಿಣ ಕನ್ನಡಕ್ಕೆ ಬರುವಂತಹ ಅಕ್ಕಿಯನ್ನು ಸಂಪಾಜೆಯಲ್ಲಿ ಬರುವುದಕ್ಕೆ ಬಿಡುತ್ತಿರಲಿಲ್ಲ. ಆ ಸಮಯದಲ್ಲಿ ಕೊಡಗಿನಲ್ಲಿ ಬಹಳ ಅಕ್ಕಿಯನ್ನು ಬೆಳೆಯುತ್ತಿದ್ದರು. ಅಂತಹ ಸಂದರ್ಭದಲ್ಲಿ ಸಂಪಾಜೆಗೆ ಹುಚ್ಚಮಾಸ್ತಿಗೌಡರು ಬರುವಂತಹ ದಿವಸ ಅಕ್ಕಿ ಗೇಟನ್ನು ಮುರಿಯುವಂತಹ ಒಂದು ಚಳುವಳಿಯನ್ನು ಮಾಡಿದರು. ಆಗ ನಾವು ಕಾಲೇಜಿಗೆ ಹೋಗುವಂತಹ ಸಂದರ್ಭವಿತ್ತು. ಆಗ ನಾನು ಎ.ಬಿ.ವಿ.ಪಿ.ಯಲ್ಲಿ ಕೆಲಸ ಮಾಡುತ್ತಿದ್ದೆ. ಡಾ:ವಿ.ಎಸ್.ಆಚಾರ್ಯರು ಆಗ ನಮ್ಮ ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧ್ಯಕ್ಷರಾಗಿದ್ದರು. ಹಿಂದಿನ ದಿವಸ ಸೂಳ್ಯಕ್ಕೆ ಹುಚ್ಚಮಾಸ್ತಿಗೌಡರು ಬಂದು ಉಳಿದುಕೊಂಡಿದ್ದರು. ಅವರ ವಿರುದ್ಧ ಒಂದು ಪ್ರತಿಭಟನೆ ಮಾಡಿ ಅಲ್ಲಿಂದ ಸಂಪಾಜೆಗೆ ಬಂದು ಅಕ್ಕಿಯ ಗೇಟನ್ನು ಮುರಿಯುವಂತಹ ಒಂದು ಕೆಲಸ ಕಾರ್ಯದಲ್ಲಿ ಹುಡುಗರೆಲ್ಲರೂ ಬಂದು ಭಾಗವಹಿಸಬೇಕೆಂದು ನಮ್ಮೆಲ್ಲರನ್ನು ಕೇಳಿದ್ದ ಕಾರಣ ನಾವೆಲ್ಲರು ಹೋಗಿದ್ದೆವು.

ಆ ದಿವಸ ಡಾ:ವಿ.ಎಸ್.ಆಚಾರ್ಯರವರು ಒಂದು ಅದ್ಭುತ ಭಾಷಣವನ್ನು ಮಾಡಿದರು. ಆಗ ಅವರು ತುಂಬಾ ಯುವಕರಾಗಿದ್ದರು. ಅವರು ಸಮಾಜದಲ್ಲಿ ಸಾಮಾನ್ಯ ಜನರ ಮೂರು ಹೊತ್ತಿನ ತುತ್ತಿಗೆ ತೊಂದರೆ ಆಗುವಂತಹ ಸಂದರ್ಭದಲ್ಲಿ ಯಾವ ರಾಜಕೀಯ ಪಕ್ಷವಾಗಲಿ ರಾಜಕಾರಣವನ್ನು ಮಾಡಬಾರದು, ಅದಕ್ಕೆ ಬೇಕಾದಂತಹ ಪೂರಕ ವ್ಯವಸ್ಥೆಗಳನ್ನು ಯಾವ ರೀತಿ, ಮಾಡಬೇಕು. ಅದನ್ನು ಮಾಡದಿದ್ದರೆ ಒಂದು ರಾಜಕೀಯ ಪಕ್ಷವಾಗಿ ಹೇಗೆ ನಾವು ಕರ್ತವ್ಯ ನಿರ್ವಹಣೆ ಮಾಡಬೇಕೆಂದು ಒಂದು ಸುದೀರ್ಘವಾದಂತಹ ಸುಮಾರು 15 ನಿಮಿಷಗಳ ಭಾಷಣ ಮಾಡಿದರು. ಈಗಿನ ರೀತಿ ಅವರು ಮೃದುವಾಗಿ ಮಾತನಾಡುತ್ತಿರಲಿಲ್ಲ. ಸ್ವಲ್ಪ ಜೋರಾಗಿ ಮಾತನಾಡುತ್ತಿದ್ದರು.ಆ ದಿವಸ ನಾನು ಹೋರಾಟದಲ್ಲಿ ಭಾಗವಹಿಸಿದ ದಿನದಿಂದಲೇ ಭಾರತೀಯ ಜನಸಂಘಕ್ಕೆ ನನ್ನ ಪ್ರವೇಶವಾಯಿತು. ಆ ದಿವಸದ ಆವರ ಭಾಷಣವೇ ನನಗೆ ಪ್ರೇರಣೆಯಾಯಿತು. ಅವರೇ ನನ್ನ ರಾಜಕೀಯ ಗುರುಗಳು. ಅದರ ನಂತರ ಅವರ ಜೊತೆ ನಿಕಟವಾದಂತಹ ಸಂಪರ್ಕವೇ ನನ್ನನ್ನು ಈ ಸ್ಥಾನಕ್ಕೇರಿಸುವುದಕ್ಕೆ ಬೇರೆ ಬೇರೆ ಹಂತದಲ್ಲಿ ನನಗೆ ಸಹಕಾರಿಯಾಗಿದೆ, ಹಾಗೂ ಆವರ ಆಶೀರ್ವಾದದಿಂದ ನಾನು ಇವತ್ತು ಈ ಸ್ಥಾನದಲ್ಲಿ ನಿಂತಿದ್ದೇನೆ. ಪ್ರಾಯಶಃ ಇವತ್ತಿನ ದಿವಸ ಅವರು ನಮ್ಮ ಜೊತೆಯಲ್ಲಿ ಇಲ್ಲ. ಆದರೆ ಅವರು ನಡೆದು ಬಂದಂತಹ ರೀತಿ, ಆವರ ಕಾರ್ಯವೈಖರಿ, ವಿಚಾರಧಾರೆ, ಸರಳತೆ, ಪ್ರಾಮಾಣಿಕತನ ಮತ್ತು ನೀವೆಲ್ಲರೂ ಅವರ ಸಹಪಾಠಿಗಳು ವಿಶೇಷವಾಗಿ ಅವರು ಕೋಪ ಮಾಡಿಕೊಂಡಿರುವಂಥದ್ದನ್ನು ಯಾರೂ ನೋಡಿರುವುದಿಲ್ಲ. ಅಂತಹ ಅದ್ಭುತವಾದಂತಹ ವ್ಯಕ್ತಿ ಅವರು. ಅಕ್ಕಿಗೇಟಿನ ಹಗರಣದ ಪ್ರಕರಣದ ನಂತರ ನಾನು ರಾಜಕಾರಣವನ್ನು ಪ್ರವೇಶ ಮಾಡಿದೆ. ಅವರ ಜೊತೆ ನನಗೆ ನಿರಂತರ ಸಂಪರ್ಕವಿತ್ತು. 1974 ರಿಂದ 1977ರವರೆಗೆ ಅವರು ಭಾರತೀಯ ಜನಸಂಘದ ಜಿಲ್ಲಾಧ್ಯಕ್ಷರಾಗಿದ್ದರು, 1977 ರಿಂದ 1980 ರವರೆಗೆ ಜನತಾಪಕ್ಷದ ಜಿಲ್ಲಾಧ್ಯಕ್ಷರು, ನಂತರ 1980 ರಿಂದ 1983ರವರೆಗೆ ಬಿ.ಜೆ.ಪಿ. ಜಿಲ್ಲಾಧ್ಯಕ್ಷರು, 1984 ರಿಂದ ಸುಮಾರು 20 ವರ್ಷಗಳ ಕಾಲ ಇವರು ರಾಜ್ಯದ ಉಪಾಧ್ಯಕ್ಷರಾಗಿದ್ದರು ಮತ್ತು ರಾಷ್ಟ್ರೀಯ

ಕಾರ್ಯಕಾರಿಣಿ ಸಮಿತಿಯ ಸದಸ್ಯರಾಗಿದ್ದರು. ಈ ಭಾಗದಿಂದ ಅವರನ್ನು ಬಿಟ್ಟು ರಾಜಕೀಯ ರಾಜಕಾರಣಿಯೇ ಇರಲಿಲ್ಲ. ಅಂತಹ ಒಬ್ಬ ಅದ್ಭುತ ವ್ಯಕ್ತಿ. ಅವರು ಒಬ್ಬ ಅಜಾತಶತ್ರು ಎಂದು ತಾವು ಈಗಲೆ ಉಲ್ಲೇಖ ಮಾಡಿದ್ದೀರಿ. ಅವರನ್ನು ಕೇವಲ ಬಿ.ಜೆ.ಪಿ.ಯವರು ಮಾತ್ರ ಪ್ರೀತಿ ಮಾಡುತ್ತಿರಲಿಲ್ಲ, ಎಲ್ಲಾ ಪಕ್ಷದವರು ಅವರನ್ನು ಪ್ರೀತಿ ಮಾಡುತ್ತಿದ್ದರು. ಉದಾಹರಣೆಗೆ ಹೇಳಬೇಕೆಂದರೆ ಈಗ ಇಲ್ಲಿ ಮಾನ್ಯ ಪ್ರತಾಪಚಂದ್ರಶೆಟ್ಟರು ಇಲ್ಲ. ಡಾ. ವಿ.ಎಸ್.ಆಚಾರ್ಯರವರು ನಿಧನರಾದ ದಿವಸ ದಕ್ಷಿಣ ಕನ್ನಡ ಉಡುಪಿ ಜಿಲ್ಲೆಯ ಎಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಅವರ ಭಾವಚಿತ್ರವನ್ನಿಟ್ಟು ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದಾರೆ. ಈ ರೀತಿ ದೇಶದ ರಾಜಕಾರಣದಲ್ಲಿ ಎಲ್ಲಿಯೂ ಇರಲಿಕ್ಕಿಲ್ಲ. ಅವರು ಯಾವ ರೀತಿಯಾದಂತಹ ವ್ಯಕ್ತಿಯಾಗಿದ್ದರು ಎಂದು ಹೇಳುವುದಕ್ಕೆ ಇದಕ್ಕಿಂತ ದೊಡ್ಡ ಉದಾಹರಣೆ ಬೇಕಾಗಿಲ್ಲ. ನಾವೇನೋ ಕೊನೆಯ ಹಂತದಲ್ಲಿ ಬಂದು ಒಂದು ಮಾಲೆ ಹಾಕಿ, ಏನೋ ಒಂದು ಮಾತನಾಡಿ ಹೋಗುತ್ತೇವೆ. ಆದರೆ ಸನ್ಮಾನ್ಯ ವೀರಪ್ಪಮೊಯಿಲಿಯವರು, ಸನ್ಮಾನ್ಯ ಆಸ್ಕರ್ ಫರ್ನಾಂಡೀಸ್‌ರವರು ತುಂಬಾ ಹೊತ್ತು ಬಂದಿದ್ದರು. ಮಾನ್ಯ ಜನಾರ್ಧನಪೂಜಾರಿಯವರು ರಾತ್ರಿ ಎರಡು ಗಂಟೆಯವರೆವಿಗೂ ಇದ್ದು ಅವರ ಶವ ಸಂಸ್ಕಾರದಲ್ಲಿ ಭಾಗವಹಿಸಿದರು. ಅಂದರೆ ಒಬ್ಬ ವ್ಯಕ್ತಿ ಹೇಗೆಂದು ನಾವೇನು ಜಗತ್ತಿಗೆ ಹೇಳಬೇಕಾಗಿಲ್ಲ. ಅವರ ನಡವಳಿಕೆಯಿಂದಲೇ ತಿಳಿಯುತ್ತದೆ. ಅವರ ಅಂತಿಮ ದಿನದಲ್ಲಿ ಅವರ ವಿಚಾರದ ಬಗ್ಗೆ ಹೇಗೆ ತಮ್ಮ ಅಟ್ಯಾಚ್‌ಮೆಂಟ್ ಇತ್ತು ಎಂದರೆ ಎಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಅವರ ಭಾವಚಿತ್ರವನ್ನಿಟ್ಟು ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದಾರೆ. ನಾನು ಪ್ರಥಮಬಾರಿಗೆ ಈ ರೀತಿಯಾದಂತಹ ದೃಶ್ಯವನ್ನು ನೋಡಿದ್ದು. ನಾನು ಸುಮಾರು 30 ವರ್ಷದಿಂದ ಸಣ್ಣ ಪುಟ್ಟ ರಾಜಕೀಯ ಮಾಡಿಕೊಂಡು ರಾಜಕಾರಣದಲ್ಲಿದ್ದೇನೆ. ಈ ಒಂದು ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಯಾವುದೇ ಒಬ್ಬ ರಾಜಕಾರಣಿ ನಾನು ಇದ್ದಾಗ ನನಗೆ ಬೈದರೂ ತೊಂದರೆ ಇಲ್ಲ, ನಾನು ಹೋದಮೇಲೆ ನಾನು ಎಲ್ಲರಿಗೂ ಮಾದರಿ ಆಗಬೇಕೆಂಬ ಒಂದು ಆಸೆಯನ್ನು

ಇಟ್ಟುಕೊಳ್ಳಬೇಕು. ಈ ರೀತಿಯಾದಂತಹ ರಾಜಕಾರಣ ಇವತ್ತಿನ ದಿವಸವಂತು ಬಹಳ ಆವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ.

ಅವರ ಕೆಲವು ಸಂಗತಿಗಳನ್ನು ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ಮಾನ್ಯ ಸಭಾಪತಿಯವರೆ ನಿಮಗೆ ಎಲ್ಲಾ ಗೊತ್ತು. ಆದರೆ ಇದು ಸದನದಲ್ಲಿ ದಾಖಲಾಗಬೇಕೆಂದು ಹೇಳುತ್ತೇನೆ, ಆವರ ಅತ್ಯಂತ ಬಹಳ ದೊಡ್ಡ ಒಡನಾಡಿ ನೀವು ನಿಮಗೆ ಅವರ ಬಗ್ಗೆ ಪೂರ್ಣ ಗೊತ್ತಿದೆ. ಸುಮಾರು 70ರ ದಶಕದಲ್ಲಿ ಅವರ ಹತ್ತಿರ ಒಂದು ಸ್ಕೂಟರ್ ಇತ್ತು. ಅವರು ಮೈಸೂರಿಗೆ, ಬೆಳಗಾಂಗೆ ಸ್ಕೂಟರ್ ನಲ್ಲಿ ಪ್ರಯಾಣ ಮಾಡುತ್ತಿದ್ದರು. ಅವರು ಪಕ್ಷದ ಕೆಲಸಕ್ಕೆ ದಿನಕ್ಕೆ 300 ರಿಂದ 400 ಕಿಲೋ ಮೀಟರ್ ಗಳ ದೂರ ಪ್ರಯಾಣ ಮಾಡುತ್ತಿದ್ದರು. ಯಾವ ರೀತಿಯಾಗಿದ್ದರು ಎಂದು ಆಲೋಚನೆ ಮಾಡಿ. ಈಗ ನೋಡಿದರೆ ಅವರು ಆ ರೀತಿಯಾಗಿ ಎಲ್ಲಾ ಓಡಾಡಿದ್ದಾರೆಯೇ ಎಂದು ಆಲೋಚನೆ ಮಾಡುವುದಕ್ಕೂ ಸಾಧ್ಯವಿಲ್ಲ ಎನ್ನುವ ರೀತಿಯಲ್ಲಿ ಅವರ ಕರ್ತವ್ಯ ನಿರ್ವಹಣೆಯಾಗಿದೆ. ನನಗೆ ಅವರ ಬಗ್ಗೆ ಭಾರೀ ಸ್ಪಷ್ಟವಾದಂತಹ ಸಂಗತಿ ಗೊತ್ತಿದೆ. ಅವರು ಎಂ.ಎಲ್.ಸಿ.ಯಾದ ಮೇಲೆ ಸ್ವಚ್ಛ ಉಡುಪಿಯನ್ನಾಗಿ ಮಾಡಬೇಕೆಂದು ಪುರಸಭೆಯಲ್ಲಿ ಒಂದು ಮೀಟಿಂಗ್ ಕರೆದಿದ್ದರು. ಇವರು ಆ ಮೀಟಿಂಗ್‌ಗೆ ಹೋಗಿದ್ದರು. ಆ ಮೀಟಿಂಗ್ಗೆ ಹೋಗಿ ಅಲ್ಲಿಂದ ಅವರು ಅವರ ಮನೆಗೆ ಬರುತ್ತಿದ್ದರು. ನಿಮಗೆ ಗೊತ್ತಿದೆ. ಉಡುಪಿಯ ಶ್ರೀ ಕೃಷ್ಣ ಮಠದ ಪಕ್ಕದಲ್ಲಿ 'ಗೀತಾಂಜಲಿ' ಎಂದು ಒಂದು ಸಿನಿಮಾ ಮಂದಿರ ಇದೆ. ಅದರ ಪಕ್ಕದಲ್ಲಿ ಒಂದು ಸಣ್ಣ ಲಾಟರಿ ಅಂಗಡಿ ಇತ್ತು. ಈಗ ಲಾಟರಿ ನಿಷೇಧವಾಗಿರುವುದರಿಂದ ಇಲ್ಲ. ಇವರು ಸ್ವಚ್ಛ ಉಡುಪಿ ಬಗ್ಗೆ ಮೀಟಿಂಗ್ ನಂತರ ಮನೆಗೆ ಹೋಗುವಾಗ ಇವರ ಮುಂದೆ ಒಬ್ಬ ಲಾಟರಿಯನ್ನು ಆಡುವಂತಹವನು ಹೋಗುತ್ತಿದ್ದ. ಅವನು ತೆಗೆದುಕೊಂಡಂತಹ ಲಾಟರಿ ಟಿಕೇಟ್‌ಗೆ ಲಾಟರಿಯಲ್ಲಿ ಹಣ ಬಂದಿರಲಿಲ್ಲ. ಅವನು ಲಾಟರಿಯ ಫಲಿತಾಂಶವನ್ನು ನೋಡಿ ಲಾಟರಿಯಲ್ಲಿ ಹಣ ಬರದೇ ಇರುವಂತಹ ಲಾಟರಿ ಟಿಕೇಟ್‌ಗಳನ್ನು ಹರಿದು ಹಾಕಿಕೊಂಡು ಹೋಗುತ್ತಿದ್ದ. ಡಾ: ವಿ.ಎಸ್.ಆಚಾರ್ಯರು ಅವನು ಹರಿದು ಹಾಕಿದಂತಹ ಲಾಟರಿ

ಟಿಕೇಟ್‌ಗಳನ್ನು ಅವನ ಹಿಂದಿನಿಂದ ಹೋಗಿ ಸುಮಾರು 100 ರಿಂದ 150 ಮೀಟರ್ ದೂರ ನಿರಂತರವಾಗಿ 15 ನಿಮಿಷಗಳ ಕಾಲ ಹಿಂಬಾಲಿಸಿ ಅವನು ಎಷ್ಟೆಲ್ಲಾ ಲಾಟರಿ ಟಿಕೇಟ್‌ಗಳನ್ನು ಹರಿದು ಹಾಕಿದ್ದಾನೆ ಅದೆಲ್ಲವನ್ನು ಎತ್ತಿಕೊಂಡು ಹೋಗಿದ್ದಾರೆ. ನೀವು ಆಲೋಚನೆ ಮಾಡಿ, ನಾವೆಲ್ಲಾ ರಾಜಕಾರಣಿಗಳು ಬಗ್ಗಿದರೆ ಮಾಧ್ಯಮದವರು ಫೋಟೋ ತೆಗೆದು ನಾಳೆಯ ದಿವಸ ಪತ್ರಿಕೆಯಲ್ಲಿ ಪ್ರಸಾರ ಮಾಡುತ್ತಾರೆಂದು ಅಂಥದ್ದನ್ನೆಲ್ಲಾ ಮಾಡುವುದಕ್ಕೆ ಹೋಗುವುದಿಲ್ಲ. ಸಾಧಾರಣವಾಗಿ ಆ ರೀತಿಯಾಗಿ ಮಾಡಿದವನಿಗೆ ಬೈಯುತ್ತೇವೆ. ಆವನು ಹರಿದು ಹಾಕಿದಂತಹ ಎಲ್ಲವನ್ನು ಎತ್ತಿಕೊಂಡು ಕಸವನ್ನು ಹಾಕುವಂತಹ ತೊಟ್ಟಿಗೆ ಹಾಕಿದ್ದಾರೆ. ಅದನ್ನು ಉದಯವಾಣಿ ಪತ್ರಿಕೆಯವರಿಗೆ ಯಾರೋ ಫೋನ್ ಮಾಡಿದ್ದರಿಂದ ಅದನ್ನು ಫೋಟೋ ತೆಗೆದು ಮಾರನೆಯ ದಿವಸ ಪತ್ರಿಕೆಯಲ್ಲಿ ಬಂದಿದೆ. ಬಹುಶಃ ನಾವ್ಯಾರು ಇವತ್ತು ಈ ರಾಜ್ಯದಲ್ಲಿ ಇಂತಹ ಕೆಲಸವನ್ನು ಮಾಡುವುದಿಲ್ಲ, ನಾವು ನಮ್ಮ ಕಿಸೆಯಲ್ಲಿರುವಂತಹ ಬೇಡವಾದ ಚೀಟಿಯನ್ನೇ ಹರಿದು ಹಾಕುತ್ತೇವೆ. ಇಂತಹ ಅದ್ಭುತವಾದಂತಹ ವ್ಯಕ್ತಿತ್ವ ಡಾ: ವಿ.ಎಸ್.ಆಚಾರ್ಯರವರದು. ಇದನ್ನೆಲ್ಲಾ ನಾವು ನೋಡಿಕೊಳ್ಳಬೇಕಾಗುತ್ತದೆ. ಅವರ ಇನ್ನೊಂದು ವಿಷಯ ಎಲ್ಲರಿಗೂ ಕೂಡ ಗೊತ್ತಿರುವಂಥದು. ಎಂದರೆ ಅವರ ಮನೆ ತಿಂಗಳ ಖರ್ಚು, ಯಾವ ತಿಂಗಳು ಕೂಡ 25,000 ರೂಪಾಯಿಗಳನ್ನು ಮೀರಿರಲಿಲ್ಲ. ಬೇಕಾದರೆ ನೀವು ದಾಖಲೆಯನ್ನು ತೆಗೆದು ನೋಡಿ, ಅದರ ಅರ್ಥ ಖರ್ಚು ಮಾಡಬಾರದೆಂದಲ್ಲ, ಒಬ್ಬ ಮಂತ್ರಿ ಅವರ ಮನೆಗೆ ಬಂದವರಿಗೆ ಚಹಾ ಕೊಡಬೇಕು, ತಿಂಡಿ, ಊಟ ಕೊಟ್ಟರೆ ನೆಮ್ಮದಿಯಾಗಿರುತ್ತಾರೆಂದು ಎಲ್ಲರಿಗೂ ಗೊತ್ತಿದೆ. ಡಾ: ವಿ.ಎಸ್. ಆಚಾರ್ಯರವರು ಸರ್ಕಾರದ ಹಣವನ್ನು ಪೋಲು ಮಾಡಬಾರದು ಎನ್ನುವುದಕ್ಕೆ ಸ್ವತಃ ಅವರ ಜೀವನವೇ ಒಂದು ಸಾಕ್ಷಿ. ಅವರ ಮನೆಯ ಖರ್ಚು ತಿಂಗಳಿಗೆ 23,500 ರೂಪಾಯಿಗಳಾಗುತ್ತಿತ್ತಂತೆ. ನಾನು ಲೆಕ್ಕ ತರಿಸಿಕೊಂಡು ನೋಡಿದೆ, ಅಂದರೆ ತಿಂಗಳಿಗೆ 25,000 ರೂಪಾಯಿಗಳಿಗಿಂತಲೂ ಹೆಚ್ಚಿಗೆ ಹೋಗಲಿಲ್ಲ. ಈಗ ದಿನಕ್ಕೆ 2,50,000 ರೂಪಾಯಿಗಳನ್ನು ಖರ್ಚು ಮಾಡುವವರೇ ಜಾಸ್ತಿ ಇರುವವರು 25,000

ರೂಪಾಯಿಗಳಲ್ಲಿ ಒಂದು ತಿಂಗಳಿನಲ್ಲಿ ಒಬ್ಬ ಮಂತ್ರಿಯಾಗಿ ನಿಭಾಯಿಸಿದ್ದಾರೆ ಎನ್ನುವುದನ್ನು ನೋಡಿದರೆ ಎಂತಹ ಅದ್ಭುತ ವ್ಯಕ್ತಿತ್ವ ಎನ್ನುವುದು ಗೊತ್ತಾಗುತ್ತದೆ. ನಾವೆಲ್ಲರೂ ಇದನ್ನು ಕಲಿತುಕೊಳ್ಳಬೇಕು. ನಾವು ಇದನ್ನು ಎಲ್ಲರಿಗೂ ತಿಳಿಸುವಂತಹ ಕೆಲಸ ಕಾರ್ಯಗಳಾಗಬೇಕು. ಅವರು ಇಂತಹ ಅದ್ಭುತ ವ್ಯಕ್ತಿಯಾಗಿದ್ದರು. 1970ರ ದಶಕದಲ್ಲಿ ಬಹಳ ದೊಡ್ಡದಾಗಿರತಕ್ಕಂತಹ ಕೇರಳದಲ್ಲಿ ಭಾರತೀಕರಣ ರಾಲಿ ಎಂದು ಆಗಿತ್ತು. ಕಣ್ಣೂರಿನಿಂದ ದೆಹಲಿ ಯವರೆಗೆ ನಮ್ಮ ಭಾರತೀಯ ಜನ ಸಂಘ ರ್‍ಯಾಲಿಯಾಗಿತ್ತು. ಆ ಸಂದರ್ಭದಲ್ಲಿ ಭಾರತೀಯ ಜನತಾ ಪಾರ್ಟಿಗೆ ಅಟಲ್ ಬಿಹಾರಿ ವಾಜಪೇಯಿ ಯವರು ದೆಹಲಿಯಿಂದ ಮಂಗಳೂರು ಏರ್‌ಪೋರ್ಟ್‌ಗೆ ಬಂದು ಇಳಿದರು. ಅವರು ಅಲ್ಲಿಂದ ಕಣ್ಣೂರಿಗೆ ಹೋಗಬೇಕಾಗಿತ್ತು. ಡಾ : ವಿ.ಎಸ್. ಆಚಾರ್ಯರವರು  ಕಾರ್ ಡ್ರೈವರ್ ಎಡ ಬದಿಯಲ್ಲಿ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು. ಹಿಂದಿನ ಸೀಟ್‌ನಲ್ಲಿ ನಾನು ಮತ್ತು ಕಾಸರಗೋಡಿನ ಜಿಲ್ಲಾಧ್ಯಕ್ಷರಾಗಿದ್ದಂತಹ ಶ್ರೀ ನಾರಾಯಣ ಭಟ್ ಎನ್ನುವವರು ಸೇರಿ ಒಟ್ಟು ನಾಲ್ಕು ಜನರಿದ್ದೇವು. ಇಲ್ಲಿಂದ ಕಣ್ಣೂರಿಗೆ ಮತ್ತು ಕಣ್ಣೂರಿನಿಂದ ಮಂಗಳೂರಿಗೆ ವಾಪಸ್ಸು ಬರುವವರೆಗೆ ಕಾರ್ ಡ್ರೈವ್ ಮಾಡಿಕೊಂಡು ಹೋಗಿದ್ದು ಡಾ: ವಿ.ಎಸ್.ಆಚಾರ್ಯರವರೆ. ನಾವೊಂದು ಸರಳತೆಗೆ, ವ್ಯವಸ್ಥೆಗೆ ಒಬ್ಬರು ಹೇಗೆ ಜೋಡಣೆ ಮಾಡಿಕೊಂಡಿದ್ದಾರೆ.ಅಟಲ್ ಬಿಹಾರಿ ವಾಜಪೇಯಿಯವರ ಜೊತೆಯಲ್ಲಿ ಡ್ರೈವ್ ಮಾಡಿಕೊಂಡು ಹೋಗುವುದು ಎಲ್ಲರಿಗೂ ಕೂಡ ಖುಷಿಯನ್ನು ಕೊಡುವಂಥದ್ದು. ನಾಯಕರಾದವರು ಡ್ರೈವ್ ಮಾಡುವಂಥದ್ದು ಎಂದರೆ ಬಹಳ ದೊಡ್ಡ ಸಂಗತಿ. ಏಕೆಂದರೆ ಇವತ್ತು ತುಂಬ ಜನರು ಸಾಧಾರಣ ತಾಲ್ಲೂಕು ಪಂಚಾಯಿತಿ ಸದಸ್ಯರಾದ ಮೇಲೆ ಅವರ ಕಾರಿಗೆ ಡ್ರೈವರ್ ಇಟ್ಟುಕೊಂಡಿರುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಇದೆಲ್ಲಾ ಒಬ್ಬ ವ್ಯಕ್ತಿಯ ವ್ಯಕ್ತಿತ್ವದಲ್ಲಿ ಅಡಗಿರುವಂತಹ ಸಂಗತಿ ಎಂದು ನಾನು ಭಾವಿಸುತ್ತಿದ್ದೇನೆ. ನೀವು ಉಡುಪಿಯಲ್ಲಿ ಮಲ ಹೊರುವಂತಹ ಪದ್ಧತಿಯನ್ನು ನಿಷೇಧ ಮಾಡಿರುವಂಥದ್ದು. ಸಾರ್ವತ್ರಿಕವಾಗಿ ಒಂದು ದೊಡ್ಡ ಹೆಜ್ಜೆಯನ್ನು ಇಡಿ ದೇಶದ ಒಂದು ಶೋಷಿತರನ್ನು ಮೇಲೆ ತರುವುದಕ್ಕೆ ತೆಗೆದುಕೊಂಡಂತಹ

ಅತ್ಯಂತ ದೊಡ್ಡ ಹೆಜ್ಜೆ. ಅವರು 1967ನೇ ಇಸವಿಯಲ್ಲಿ ದೀನ್ ದಯಾಳ್ ಶರ್ಮರವರ ಭಾಷಣಕ್ಕೆ ಪ್ರಭಾವಿತನಾಗಿ 1968ನೇ ಇಸವಿಯಲ್ಲಿ ಅವರು ಬಿಜೆಪಿಯನ್ನು ಸೇರಿರುವಂಥದ್ದು ಎಂದು ಹೇಳಿದ್ದಾರೆ. 1968 ಮತ್ತು 1973ರಲ್ಲಿ ಎರಡು ಸಾರಿ ಅಧ್ಯಕ್ಷರಾಗಿದ್ದರು. ಅವರು ಎಷ್ಟು ದಿನ ಅಧ್ಯಕ್ಷರಾಗಿದ್ದರು, ಮೈಸೂರಿನ ಡಿವಿಜನ್ ಮಟ್ಟದ ಒಂದು ಪ್ರಶಸ್ತಿ ಮತ್ತು ರಾಜ್ಯ ಮಟ್ಟದ ಪ್ರಶಸ್ತಿಯನ್ನು ಅವರು ಎಷ್ಟು ವರ್ಷಗಳ ಕಾಲ ಮುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದರು ಅಷ್ಟು ವರ್ಷಗಳು ಕೂಡ ಪ್ರಥಮ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು. ಅವರೇನು ಆಡಳಿತ ಪಕ್ಷದ ಕಡೆಯವರೇನು ಆಗಿರಲಿಲ್ಲ. ಸಾಧಾರಣವಾಗಿ ಪ್ರಶಸ್ತಿಗಳು ಯಾವ ರೀತಿಯಾಗಿ ಸಿಗುತ್ತದೆಂದು ಎಲ್ಲರಿಗೂ ಕೂಡ ಗೊತ್ತಿರುವಂಥದ್ದು. ಆದಕಾರಣ ಅಂತಹ ಸಂದರ್ಭಗಳಲ್ಲಿಯೂ ಕೂಡ ಅದ್ಭುತವಾದಂತಹ ಕೆಲಸವನ್ನು ಮಾಡಿರುವುದಕ್ಕೆ ಸಾಕ್ಷಿ ಎಂದು ತಿಳಿದುಕೊಂಡಿದ್ದೇನೆ. ಅವರು ಸುವರ್ಣ ನದಿಯಿಂದ ನೀರನ್ನು ತರಬೇಕೆಂದು ಆಗಿನ ಕಾಲದ ಯೋಜನೆಯಾಗಿತ್ತು. ಇವತ್ತು ಕೂಡ 24*7 ನೀರನ್ನು ಕೊಡುವಂಥದ್ದು ಇವತ್ತಿಗೂ ಯಾವುದಾದರು ಇದ್ದರೆ ಅದು ಡಾ: ವಿ.ಎಸ್. ಆಚಾರ್ಯರವರು ಮಾಡಿದಂತಹ ಯೋಜನೆ. ಇವತ್ತು ಇನ್ನೊಂದು ಹಂತವನ್ನು ಕೈಗೆತ್ತಿಕೊಳ್ಳಬೇಕೆಂದು ಮಾಡುತ್ತಿದ್ದಾರೆ. ಅಂದರೆ ಅವರಿಗೆ ಎಷ್ಟು ದೂರಗಾಮಿ ಚಿಂತನೆ ಇತ್ತು ಎನ್ನುವುದನ್ನು ನಾವೆಲ್ಲರೂ ಸಾಧಾರಣವಾಗಿ ನೋಡುತ್ತೇವೆ. ತಾತ್ಕಾಲಿಕವಾಗಿ, ವ್ಯಕ್ತಿಗತವಾಗಿ ಯಾರಿಗೋ ಕೊಟ್ಟು ಅವನಿಂದ ಕೈ ಚಪ್ಪಾಳೆ ತಟ್ಟಿಸಿಕೊಂಡು ಸಂತೋಷಪಡುವಂತಹ ರಾಜನೀತಿ ಇವತ್ತು ಇರುವಂಥದ್ದನ್ನು ಪ್ರತಿಬಾರಿಯು ನೋಡುತ್ತಿದ್ದೇವೆ. ಆದರೆ ಆ ಒಂದು ಮುನಸಿಪಾಲಿಟಿ ಮತ್ತು ಉಡುಪಿ ಜಿಲ್ಲಾಧಿಕಾರಿ ಕಛೇರಿ. ಇವತ್ತು ನಾನು ಎಲ್ಲರಲ್ಲಿಯೂ ವಿನಂತಿ ಮಾಡುವುದೇನೆಂದರೆ ದಯವಿಟ್ಟು ಎಲ್ಲರೂ ಈಗಲಾದರು ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿ ಕಛೇರಿಗಳ ಸಂಕೀರ್ಣ ಎಂತಹ ಅದ್ಭುತವಾದಂಥದ್ದು. ಈ ರೀತಿಯಾಗಿ ಇಡೀ ದೇಶದಲ್ಲಿಯೇ ಇರುವುದಕ್ಕೆ ಇಲ್ಲ. ಕರ್ನಾಟಕ ರಾಜ್ಯದಲ್ಲಿ ಉಡುಪಿಯು ಹೊಸಜಿಲ್ಲೆ. ಅವರ ಕಲ್ಪನೆ ಒಂದೇ ಒಂದು ಸ್ಕ್ರೂ ಕೂಡ ಬಾಕಿ ಇಲ್ಲ. ಜಿಲ್ಲಾಧಿಕಾರಿಗಳ ಕಛೇರಿಯನ್ನು Paper

less office ಯನ್ನಾಗಿ ಮಾಡಿದ್ದಾರೆ. ಬಹಳ ಅದ್ಭುತವಾಗಿ ಮಾಡಿದ್ದಾರೆ. ನಾನು ಮೂರು ವರ್ಷದ ಹಿಂದೆ ಹೋಗಿ ನೋಡಿದಾಗ ನಾನು ಉಡುಪಿಗೆ ಬಂದಿದ್ದನೆಯೋ ಅಥವಾ ಬೇರೆ ಎಲ್ಲಿಗಾದರೂ ಹೋಗಿದ್ದೇನೆಯೋ ಎನ್ನಿಸುತ್ತದೆ. ಅವರದೊಂದು ವಿಶೇಷತೆ ಅದು ಬಾರೀ ವಿಶೇಷತೆ. ನೀವು ಎಲ್ಲಾ ಕೇಳಿರಬಹುದು, ಸಭಾಪತಿಗಳು ಕೂಡ ಹಿಂದೆ ಎಲ್ಲಾ ತಮಾಷೆಯನ್ನು ಮಾಡುತ್ತಿದ್ದರು. ಹೇಗೆ ಎಂದರೆ, ಅವರು ಯಾವುದೇ ಒಂದು ವಿಷಯದ ಮೇಲೆ ಭಾಷಣ ಮಾಡಿದರೂ ಕೂಡ ಕೊನೆಗೆ ಉಡುಪಿಯ ಬಗ್ಗೆ ಹೇಳಿಯೇ ಅವರ ಭಾಷಣವನ್ನು ಮುಗಿಸುತ್ತಿದ್ದರು. ಅಂದರೆ ತಾನು ಹುಟ್ಟಿದಂತಹ ಜಾಗಕ್ಕೆ ಅವರಿಗೆ ಇದ್ದಂತಹ ಕಾಳಜಿ. ಅದು ಬೇಕು. ಇವತ್ತು ಬಹಳ ಜನರಲ್ಲಿ ಅದು ಇಲ್ಲ. ನಾವು ನಮ್ಮ ಕ್ಷೇತ್ರಕ್ಕೆ ಓಟಿಗಾಗಿ ಹೋಗುವಂತಹ ರಾಜಕಾರಣಿಗಳ ಸಂಖ್ಯೆ ಬಹಳ ಜಾಸ್ತಿ ಇದೆ. ಓಟಿಗಾಗಿ ಹೋಗುವಂಥದ್ದು. ಬಾಕಿಯದು ಎಲ್ಲಾ ಬೆಂಗಳೂರಿನಲ್ಲಿಯೇ ಇದ್ದು ಕೊಂಡು ರಾಜಕಾರಣ ಮಾಡುತ್ತೇವೆ. ತಿಂಗಳಿಗೆ ಒಮ್ಮೆ ಹೋಗಿ ಬಾಡು ಊಟ ಎಲ್ಲಾ ಕೊಟ್ಟು ಬಿಟ್ಟು ಸಮಾಧಾನ ಮಾಡಿ ಬರುವಂತಹ ರಾಜನೀತಿ ಇರುವಂತಹ ಈ ಕಾಲದಲ್ಲಿಯೂ ಕೂಡ, ಅವರ ಊರಿನ ಬಗ್ಗೆ ಇದ್ದಂತಹ ಅಪ್ರತಿಮ ಕಾಳಜಿ ಪ್ರಾಯಶಃ ತುರ್ತು ಪರಿಸ್ಥಿತಿಯಲ್ಲಿ ಸುಮಾರು 19–20 ತಿಂಗಳುಗಳ ಕಾಲ ಸೆರೆಮನೆ ವಾಸ ಅನುಭವಿಸಿದ್ದು, ಇದೆಲ್ಲಾ ನಾವು ಕೇಳಿದಂತಹ ಸಂಗತಿಗಳು. ನಾನು ಅವರ ಬಗ್ಗೆ ಬರೀ ಹೆಚ್ಚು ಹೇಳುವಂತಹ ಅವಶ್ಯಕತೆ ಇಲ್ಲ. ಅವರ ವಿಶೇಷತೆ ಎಂದರೆ ಅವರಿಗೆ ಯಾವುದೇ ವಿಷಯವನ್ನು ಕೊಟ್ಟು ಭಾಷಣ ಮಾಡಿ ಎಂದರೆ, ಅವರು ಆ ವಿಷಯದ ಮೇಲೆ ಬಹಳ ಅದ್ಭುತವಾಗಿ ಮಾತನಾಡುತ್ತಿದ್ದರು. ಅಷ್ಟೇ ಅಲ್ಲ ಆ ವಿಷಯಕ್ಕೆ ಮಾತ್ರ ಸೀಮಿತವಾಗಿ ಮಾತನಾಡುತ್ತಿದ್ದರು. ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋದರು ಬಹಳ ಚೆನ್ನಾಗಿ ಭಾಷಣವನ್ನು ಮಾಡುತ್ತಿದ್ದರು. ಸ್ಕೂಲ್ ಡೇ ಗೆ ಹೋದರು. ನಾವುಗಳು ಮಾತನಾಡುವುದು ಒಂದೇ ಆಸ್ಪತ್ರೆ ಉದ್ಘಾಟನೆಗೆ ಹೋಗಿ ಮಾತನಾಡುವುದು ಕೂಡ ಒಂದೇ. ಅವರು ಎಲ್ಲೆಲ್ಲಿ ಏನೇನು ಮಾತನಾಡಬೇಕು. ಆ ಸಮಯ ಪ್ರಜ್ಞೆ ಮತ್ತು ವಿಷಯ ಆಧಾರಿತವಾದಂತಹ

ಮಾತು ಇದನ್ನು ಅವರಿಂದ ನಾವು ನೋಡಿ ಕಲಿಯಬೇಕು. ಮೀನುಗಾರರ ಸಮಾವೇಶಕ್ಕೆ ಹೋದರೆ ಅದರ ಬಗ್ಗೆಯೇ ಮಾತನಾಡುತ್ತಿದ್ದರು, ಆದರೆ ಅವರು ಮೀನು ತಿನ್ನುವುದಿಲ್ಲ. ಈ ರೀತಿ ಅವರಲ್ಲಿ ಅದ್ಭುತವಾದಂತಹ ಸಂಗತಿ ಇದ್ದುದ್ದನ್ನು ನಾನು ಗಮನಿಸಿದ್ದೇನೆ. ಅಂದರೆ ಒಂದು ಅಧ್ಯಯನವನ್ನು ಮಾಡಿಯೇ ವಿಚಾರಗಳನ್ನು ಪ್ರಸ್ತಾಪ ಮಾಡುವಂತಹ ವಿಶೇಷತೆಗಳು. ಇವತ್ತು ನಾವೆಲ್ಲರೂ ಇಲ್ಲಿಗೆ ಬರುವಾಗ ಅಧ್ಯಯನದ ಬಗ್ಗೆ ಏನು ಕಾಳಜಿ ಇರುವುದಿಲ್ಲ. ನಾವು ಓದಿ ಬರುವುದೇ ಇಲ್ಲ. ಬಂದು ಏನಾದರೂ ಸಿಕ್ಕಿದಷ್ಟನ್ನು ಹೇಳಿ ಹೋಗುವಂತಹ ಪ್ರಯತ್ನವನ್ನು ಮಾಡುತ್ತೇವೆ. ಅಂದರೆ ವಿಚಾರದ ಬಗ್ಗೆ ಅಧ್ಯಯನ. ಆ ಅಧ್ಯಯನದ ಆಧಾರದ ಮೇಲೆಯೇ ಅವರ ಪ್ರತಿಪಾದನೆ. ಇದು ಅವರು ಮಾಡುತ್ತಿದ್ದಂತಹ ಆದ್ಯುತವಾದಂತಹ ಕೆಲಸ ಕಾರ್ಯಗಳನ್ನು ನೋಡಿದ್ದೇವೆ. ನಮಗೆ ಇನ್ನೊಂದು ಬಾರಿ ದೊಡ್ಡ ಸಂಗತಿ ಎಂದರೆ, ಈಗ ನಾವು ಇಲ್ಲಿ ಅಧಿಕಾರಕ್ಕೆ ಬರುವುದಕ್ಕೆ ಒಂದು ಕಾರಣ ಎಂದರೆ, ಅವರು ಮಾಡಿಕೊಟ್ಟಂತಹ ಚುನಾವಣಾ ಪ್ರಣಾಳಿಕೆ. ಅವರು ನಿರಂತರವಾಗಿ ಹಿಂದಿನಿಂದಲೂ ಚುನಾವಣಾ ಪ್ರಣಾಳಿಕೆಯನ್ನು ಮಾಡಿಕೊಡುತ್ತಿದ್ದರು. ಬಿಜೆಪಿ ಚುನಾವಣಾ ಪ್ರಣಾಳಿಕೆ ಎಂದರೆ ಅವರು. ಒಮ್ಮೊಮ್ಮೆ ನೀವುಗಳೆಲ್ಲರೂ ಅವರನ್ನು ಸೇರುತ್ತಿದ್ದಿರಿ. ಚುನಾವಣಾ ಪ್ರಣಾಳಿಕೆ ಯಾವುದೇ ಇರಲಿ, ನಿಮ್ಮ ಲೋಕಲ್ ಬಾಡಿಯದು ಇರಲಿ ಮತ್ತು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಯದು ಇರಲಿ, ವಿಧಾನ ಸಭೆಯ ಚುನಾವಣೆಯಾಗಲಿ, ಕೇಂದ್ರಕ್ಕೂ ಕೂಡ ದಕ್ಷಿಣ ಭಾರತದ ಚುನಾವಣಾ ಪ್ರಣಾಳಿಕೆಯನ್ನು ಒದಗಿಸಿಕೊಡುತ್ತಿದ್ದದ್ದು ಡಾ : ವಿ.ಎಸ್. ಆಚಾರ್ಯ, ಇಂತಹ ಒಬ್ಬ ಅದ್ಭುತವಾದಂತಹ ವ್ಯಕ್ತಿಯಾಗಿದ್ದರು. 'ಆಡು ಮುಟ್ಟದ ಸೊಪ್ಪು ಇಲ್ಲ' ಎನ್ನುವಂತಹ ರೀತಿಯಲ್ಲಿ ಅವರು ವಿಚಾರಗಳ ಬಗ್ಗೆ ಮತ್ತೊಂದರ ಬಗ್ಗೆ ಮುಟ್ಟದಂತಹ ಮೂಲಗಳಿಲ್ಲ. ಅವರು ಅದ್ಭುತವಾದಂತಹ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರು. ಅವರು ಕೋಳಿ ಮತ್ತು ಆಮ್ಲೇಟ್ ಅನ್ನು ತಿನ್ನುತ್ತಿದ್ದರು. ಒಂದು ಸಾರಿ ಮೊಟ್ಟೆಯನ್ನು ತಿನ್ನುತ್ತಿದ್ದಾಗ ಯಾರೋ ನೀವು ಮೊಟ್ಟೆಯನ್ನು ತಿನ್ನುತ್ತೀರಾ ಎಂದು ಕೇಳಿದರಂತೆ. ಮೊಟ್ಟೆಯಲ್ಲಿ

ಬೇಕಾದಂತಹ ಪೌಷ್ಟಿಕಾಂಶ ಇರುವಂಥದ್ದು. ನಾನು ಡಾಕ್ಟರ್ ಆಗಿ ಇದ್ದುಕೊಂಡು ಮೊಟ್ಟೆಯನ್ನು ತಿನ್ನದೇ ನೀವು ಮೊಟ್ಟೆಯನ್ನು ತಿನ್ನಿ ಎಂದು ಹೇಗೆ ಹೇಳುವುದಕ್ಕಾಗುತ್ತದೆಂದು ಹೇಳಿದರಂತೆ. ಈ ರೀತಿ ಒಂದು ವಿಚಾರದ ಬಗ್ಗೆ ಸೂಕ್ಷ್ಮತೆಯನ್ನು ಅರಿತು ಕೆಲಸವನ್ನು ಮಾಡುವಂತಹ ಒಂದು ಅದ್ಭುತ ವ್ಯಕ್ತಿ. ಅವರ ಸರಳತೆ ಎಷ್ಟಿತ್ತು ಎನ್ನುವುದು ನಿಮಗೆ ಗೊತ್ತಿದೆ. ನಾನು ಎಲ್ಲರಲ್ಲಿಯೂ ಕೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಯಾರದರೊಬ್ಬರು ಅವರ ಮೊಬೈಲ್‌ಗೆ ಫೋನ್ ಮಾಡಿದರೆ ಅವರಲ್ಲದೇ ಅವರ ಪಿ.ಎ. ರಿಸೀವ್ ಮಾಡಿರುವುದು ಯಾರಾದರೂ ನೋಡಿದ್ದೀರಾ? ರಾಜಕಾರಣಿಗಳು ಅವರು ಪಂಚಾಯಿತಿ ಮೆಂಬರ್ ಕೂಡ ಮೊಬೈಲ್ ಕೈಯಲ್ಲಿ ಇಟ್ಟುಕೊಳ್ಳದೇ ಫೋನ್ ಬಂದರೆ ನನಗೆ ಕೊಡು ಎಂದು ಹೇಳಿ ಅವರ ಅಟೆಂಡರ್ ರಿಸೀವ್ ಮಾಡಿ ನಂತರ ಅವರ ಕೈಗೆ ಕೊಡುತ್ತಾರೆ. ಒಬ್ಬ ಗೃಹಮಂತ್ರಿ, ಮತ್ತೊಂದು ಇಲಾಖೆಯ ಮಂತ್ರಿಯಾಗಿ ನೀವು ಎಷ್ಟು ಹೊತ್ತಿಗೆ ಕಾಲ್ ಮಾಡಿದರು ಅವರೇ ರಿಸೀವ್ ಮಾಡುತ್ತಿದ್ದರು. ಅವರ ಇನ್ನೊಂದು ವಿಶೇಷತೆ ಎಂದರೆ ಅವರಿಗೆ ಗೊತ್ತಿರುವಂತಹ ಸಂಗತಿಯನ್ನು ಯಾರೇ ಕೇಳಿದರು ಕೂಡ ಕೇಳಿದವರಿಗೆ ಮನ ಮುಟ್ಟುವ ರೀತಿಯಲ್ಲಿ ಅದನ್ನು ಹೇಳುವಂಥದ್ದು, ತುಂಬಾ ಜನರು ಅದನ್ನು ಹೇಳುವುದಿಲ್ಲ. ಏಕೆಂದರೆ ನನಗೆ ಗೊತ್ತಾಗಿರುವುದನ್ನು ಇನ್ನೊಬ್ಬರಿಗೆ ಹೇಳಿಬಿಟ್ಟರೆ ನಾನು ಸಣ್ಣವನಾಗಿಬಿಡುತ್ತೇನೆ ಎನ್ನುವ ಕಲ್ಪನೆ. ಅವರಲ್ಲಿ ಯಾವುದೇ ವಿಚಾರವನ್ನು ಕೇಳಿ, ಅವರಿಗೆ ಗೊತ್ತಿಲ್ಲದೇ ಇದ್ದರೆ ನಾಳೆ ಬೆಳಿಗ್ಗೆ ನೋಟ್ಸ್ ಕೊಡುತ್ತೇನೆಂದು ಹೇಳಿ ಒಂದು ನೋಟ್ಸ್ ತಯಾರು ಮಾಡಿಕೊಡುತ್ತಿದ್ದರು.

(1.00 ಗಂಟೆ)

ನಾನು ಮುಖ್ಯಮಂತ್ರಿಯಾಗಿ 16 ದಿನಗಳ ಕಾಲ ಮೊದಲನೆಯ ಸುತ್ತಿನಲ್ಲಿ 34 ಇಲಾಖೆಗಳನ್ನು ನಾನು ಪುನರಾವಲೋಕನ ಮಾಡಿದ್ದೇನೆ, ಆ 34 ಇಲಾಖೆಗಳನ್ನು ಪುನರಾವಲೋಕನ ಮಾಡಿರುವುದು ಡಾ : ವಿ,ಎಸ್,ಆಚಾರ್ಯರವರೆ. ಆ ದಾಖಲೆಯನ್ನು ನಾನು ಇಟ್ಟುಕೊಂಡಿದ್ದೇನೆ. ಯಾವ–ಯಾವ ಪಾಯಿಂಟ್‌ಗಳು ಮಹತ್ವದ್ದು ಎನ್ನುವುದನ್ನು ಅವರೇ

ನೋಟ್ ಮಾಡಿಕೊಂಡು, ಎಲ್ಲಾ ಇಲಾಖೆಯ ಮಾಹಿತಿಯನ್ನು ಸಂಗ್ರಹಮಾಡಿ ಸುಮಾರು 20 ರಿಂದ 25 ಪುಟಗಳ ದಾಖಲೆ ಮಾಡಿ ನನಗೆ ಕೊಟ್ಟಿದ್ದಾರೆ. ಇವತ್ತು ನಾನು ಅವರನ್ನು ಕಳೆದುಕೊಂಡು ತುಂಬಾ ಆತಂಕದಲ್ಲಿದ್ದೇನೆ. ಇವತ್ತು ಶ್ರೀಮತಿ ಮೋಟಮ್ಮನವರು ಎತ್ತಿರುವಂತಹ ವಿಷಯಕ್ಕೆ ತಕ್ಷಣ ಆಚಾರ್ಯರವರು ಉತ್ತರವನ್ನು ಕೊಟ್ಟು ಬಿಡುತ್ತಿದ್ದರು. ಸಂಬಂಧಪಟ್ಟ ವಿಚಾರದ ಬಗ್ಗೆ ವಿಮರ್ಶಾತ್ಮಕವಾಗಿ ಹೇಳುವಂತಹ ಅದ್ಭುತವಾದ ವ್ಯಕ್ತಿಯವರಾಗಿದ್ದರು. ಇನ್ನೊಬ್ಬರ ಬಗ್ಗೆ ಅವರಲ್ಲಿ ನಂಜು, ಮತ್ಸರ ಎನ್ನುವ ಶಬ್ದಗಳು ಅವರ ಹತ್ತಿರವೂ ಸುಳಿದಿರುವುದಿಲ್ಲ. ಯಾರನ್ನೇ ಆಗಲಿ ಅವರು ಪ್ರೀತಿ, ವಿಶ್ವಾಸದಿಂದ ಮಾತನಾಡಿಸುತ್ತಿದರು, ನಂಜು. ಮತ್ಸರ ತುಂಬಿದ ಇವತ್ತಿನ ಈ ಸಮಾಜದಲ್ಲಿ ಅಂತಹ ವ್ಯಕ್ತಿ ನಮಗೆ ದಾರಿದೀಪವಾಗಿದ್ದರು. ಕರ್ನಾಟಕದಲ್ಲಿ ನಮ್ಮ ಪಕ್ಷ ಆಡಳಿತಕ್ಕೆ ಬಂದ ಮೇಲೆ ಎಲ್ಲಾ ವಿಚಾರಗಳಲ್ಲಿ ಅವರ ಪೂರಕ ಪ್ರಯತ್ನಗಳು ಇದ್ದೆ ಇವೆ. ಉದಾ: ಮಿಶನ್ 2021 ಭವಿಷ್ಯದಲ್ಲಿ ಕರ್ನಾಟಕ ಹೇಗೆ ಇರಬೇಕು ಎನ್ನುವುದಕ್ಕೆ 12 ಟಾಸ್ಕ್ ಪೋರ್ಸ್‌ಗಳನ್ನು ಮಾಡಲಾಗಿದೆ. ಈ ಬಗ್ಗೆ ಮಾನ್ಯ ಆಚಾರ್ಯರವರು ಹೇಳಿದರು ಎಂದೇ ಇವುಗಳನ್ನು ಮಾಡಲಾಯಿತು. ಅವರು ಗೃಹ, ವೈದಕೀಯ, ಉನ್ನತ ಶಿಕ್ಷಣ ದಂತಹ ಉನ್ನತ ಖಾತೆಗಳನ್ನು ವಹಿಸಿಕೊಂಡು ಕೆಲಸವನ್ನು ಮಾಡಿದವರು. ಅವರು ಯಾವುದೇ ಖಾತೆಯನ್ನು ವಹಿಸಿಕೊಂಡರು ಅದರ ಬಗ್ಗೆ ಪೂರ್ತಿ ಅರಿವನ್ನು ಹೊಂದಿರುತ್ತಿದ್ದರು. ಅವರು ವಾರದಲ್ಲಿ ಕನಿಷ್ಠ ಎರಡು–ಮೂರು ದಿನಗಳ ಕಾಲ ಮನೆಯಲ್ಲಿ ಕುಳಿತುಕೊಂಡು ಕಡತಗಳನ್ನು ಪರಿಶೀಲನೆ ಮಾಡಿ ಸಹಿ ಮಾಡುತ್ತಿದರು. ಕಡತಗಳ ವಿಲೇವಾರಿಗೆ ಇನ್ನೊಂದು ಹೆಸರೇ ಡಾ: ವಿ.ಎಸ್.ಆಚಾರ್ಯ ಎಂದು. ಅವರಿಗೆ ಕಡತಗಳು ವಿಲೇವಾರಿಯಾಗದೆ ಪೆಂಡಿಂಗ್ ಇರಬಾರದು. ಅವರೇ ಸ್ವತ: ಪರಿಶೀಲನೆ ಮಾಡಿ ಸಹಿ ಮಾಡುತ್ತಿರುವಂತಹ ಕೆಲಸ–ಕಾರ್ಯಗಳನ್ನು ನಾನು ಕಂಡಿದ್ದೇನೆ. ಮಾನ್ಯ ಅಟಲ್ ಬಿಹಾರಿ ಅತ್ಯಂತ ವಾಜಪೇಯಿಯವರ ಅತ್ಯಂತ ಅಚ್ಚುಮೆಚ್ಚಿನ ಶಿಷ್ಯ ಎಂದರೆ ಕರ್ನಾಟಕದಲ್ಲಿ ಡಾ:ವಿ.ಎಸ್.ಆಚಾರ್ಯರವರು ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಆಚಾರ್ಯರವರ ವ್ಯವಸ್ಥೆ, ವ್ಯವಹಾರ

ಎಲ್ಲವನ್ನು ತುಂಬಾ ಹಚ್ಚಿಕೊಂಡಿದ್ದರು. ಇಂತಹ ದೊಡ್ಡ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಇನ್ನು 10 ವರ್ಷಗಳ ಕಾಲ ನಮಗೆಲ್ಲ ಆವರು ಮಾರ್ಗದರ್ಶನ ಮಾಡಬೇಕು. ಮೇಲ್ಮನೆಯಿಂದ ಒಳ್ಳೆಯ ಸಂದೇಶವನ್ನು ಅವರು ರಾಜ್ಯಕ್ಕೆ ಕೊಡಬೇಕು ಎನ್ನುವುದು ನಮ್ಮ ಅಪೇಕ್ಷೆಯಾಗಿತ್ತು. ಕಲುಷಿತಗೊಂಡ ಇಂದಿನ ರಾಜಕಾರಣ ವ್ಯವಸ್ಥೆಯನ್ನು ಸ್ವಲ್ಪ ಮಟ್ಟಿಗೆ ಸರಿ ದಾರಿಗೆ ತರುವಂತಹ ಸಣ್ಣ ಪ್ರಯತ್ನ, ಭಾರಿ ದೊಡ್ಡ ಪ್ರಯತ್ನ ಎಂದು ಅಲ್ಲ ಒಂದು ಸಣ್ಣ ಪ್ರಯತ್ನವನ್ನು ಅವರು ನಿರಂತರವಾಗಿ ಮಾಡುತ್ತಿದ್ದರು. ಇಷ್ಟು ದೊಡ್ಡ ವ್ಯಕ್ತಿಯನ್ನು ನಾವು ಇಂದು ಕಳೆದುಕೊಂಡಿದ್ದೇವೆ. ಉಡುಪಿ-ಚಿಕ್ಕಮಗಳೂರು ಲೋಕಸಭೆ ಚುನಾವಣೆಗೆ ಹೋದಾಗ ಎಲ್ಲಾ ಭಾಗಗಳಲ್ಲಿಯು ಡಾ: ವಿ.ಎಸ್.ಆಚಾರ್ಯರವರ ಪ್ರಸ್ತಾಪವಾಯಿತು, ಬಹಳ ಸಲ ಒಬ್ಬರನ್ನು ಕಳೆದುಕೊಂಡ ಮೇಲೆ ಮರೆಯುವುದು ಸಾಮಾನ್ಯ. ಅದು ಚುನಾವಣೆಯಂತಹ ಸಂದರ್ಭದಲ್ಲಿ ಮರೆಯುವುದು ಸಾಮಾನ್ಯ. ಆದರೆ ಇಲ್ಲಿಯ ಜನರು ಈಗ ಆಚಾರ್ಯರವರು ಇದ್ದಿದ್ದರೆ ಹೀಗೆ ಆಗುತ್ತಿತ್ತು. ಹಾಗೆ ಆಗುತ್ತಿತ್ತು ಎಂದು ಹೇಳುವುದನ್ನು ನಾನು ಕೇಳಿದ್ದೇನೆ. ಈ ರೀತಿ ತಮ್ಮ ತನವನ್ನು ಸಮಾಜದಲ್ಲಿ ಉಳಿಸಿಕೊಂಡ ಏಕೈಕ ರಾಜಕಾರಣಿ ಎಂದರೆ ಆಚಾರ್ಯರವರು ಎಂದು ನಾನು ಹೇಳಬಯಸುತ್ತೇನೆ. ಗಾಂಭೀರ್ಯ ಪೂರಿತವಾದ ವಿದ್ವತ್ತನ್ನು ಯಾರು ಮರೆಯಲು ಸಾಧ್ಯವಿಲ್ಲ. ಇಡೀ ರಾಜ್ಯಕ್ಕೆ, ಇಡೀ ದೇಶಕ್ಕೆ ಒಳ್ಳೆಯ ರಾಜಕಾರಣದಲ್ಲಿದ್ದಂತಹ ಅತ್ಯಂತ ದೊಡ್ಡ ವಸ್ತುವನ್ನು ನಾವು ಕಳೆದುಕೊಂಡಿದ್ದೇವೆ. ಈ ರೀತಿ ಸಮಾಜಮುಖಿ ಮೌಲ್ಯವನ್ನು ಎತ್ತಿ ಹಿಡಿದಂತಹ ಒಬ್ಬ ಹಿರಿಯ ರಾಜಕಾರಣಿಯನ್ನು ನಾವು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಶಾಂತಿಯನ್ನು ನೀಡಲಿ ಎಂದು ಭಗವಂತನಲ್ಲಿ ಮತ್ತೊಮ್ಮೆ ಪ್ರಾರ್ಥಿಸಿ ತಾವು ಮಂಡಿಸಿರುವ ಈ ಸಂತಾಪ ಸೂಚನೆಗೆ ನಾನು ನನ್ನ ಧ್ವನಿಗೂಡಿಸುತ್ತೇನೆ.

**ಶ್ರೀಮತಿ ಮೋಟಮ್ಮ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಇವತ್ತು ನಮ್ಮ ಎದುರು ಮಾನ್ಯ ಆಚಾರ್ಯರವರು ಇಲ್ಲ ಎಂದು ಅಂದುಕೊಳ್ಳಲು ಆಗುವುದೇ ಇಲ್ಲ. ಏಕೆಂದರೆ ಕೇವಲ ಒಂದು

ತಿಂಗಳಹಿಂದೆ ಅವರು ಆ ಸ್ಥಾನದಲ್ಲಿ ಕುಳಿತು ಮಾತನಾಡಿದ್ದಾರೆ. ಅವರು ಆ ಕಡೆ ಇರುವ ಸದಸ್ಯರಿಗೆ ಎಷ್ಟು ಗೌರವವನ್ನು ಕೊಡುತ್ತಿದರು, ಅಷ್ಟೆ ಗೌರವವನ್ನು ನಮಗೂ ಕೊಡುತ್ತಿದ್ದರು. ಅದರಲ್ಲಿಯೂ ನನಗೆ ವಿಶೇಷ ಗೌರವವನ್ನು ಕೊಡುತ್ತಿದ್ದರು. ಏಕೆಂದರೆ, ಈಗ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಆಚಾರ್ಯರವರು ಅಜಾತಶತ್ರು ಎಲ್ಲರ ಸ್ನೇಹವು ಅವರಿಗೆ ಇತ್ತು ಎಂದು ಹೇಳಿದರು. ನಾನು ಮಂತ್ರಿಯಾಗಿದ್ದಾಗ, ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆಯಾಗಿದ್ದೆ. ಆಗ ಮಾನ್ಯ ಆಚಾರ್ಯರವರು ಯಾವುದೇ ಕೆಡಿಪಿ ಮೀಟಿಂಗ್‌ಗೆ ಬರುತ್ತಿರಲಿಲ್ಲ. ಆಗ ನಾನು ಅವರಲ್ಲಿ ಕೇಳಿಕೊಂಡೆ. ಏಕೆ ಸರ್ ನೀವು ಕೆಡಿಪಿ ಮೀಟಿಂಗ್‌ಗೆ ಬರುವುದಿಲ್ಲ, ಅಲ್ಲಿಗೆ ಬಂದರೆ ನಾವು ಮಾಡುತ್ತಿರುವುದು ತಪ್ಪು ಸರಿ ಎನ್ನುವುದನ್ನು ಹಿರಿಯರಾಗಿ ತಾವು ಹೇಳಬಹುದು ಎಂದು ಕೇಳಿಕೊಂಡಾಗ ಅವರು ಒಂದು ಮಾತನ್ನು ಹೇಳಿದರು. ಇಲ್ಲಮ್ಮ ನಿಮ್ಮ ಬಗ್ಗೆ ನನಗೆ . . .

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಇನ್ನೊಂದು ವಿಷಯವನ್ನು ಹೇಳಬೇಕಂತೆ ವಿರೋಧ ಪಕ್ಷದ ನಾಯಕರು ಅವಕಾಶ ಕೊಡಬೇಕು ನಂತರ ತಾವು ತಮ್ಮ ಭಾಷಣವನ್ನು ಮುಂದುವರೆಸಿ

**ಶ್ರೀ ಡಿ.ವಿ.ಸದಾನಂದಗೌಡ:–** ಮಾನ್ಯ ಸಭಾಪತಿಗಳೆ, ಕ್ಷಮಿಸಬೇಕು, ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಮಾನ್ಯ ಮುಕುಂದರವರ ಬಗ್ಗೆಯು ಸಂತಾಪ ವ್ಯಕ್ತಪಡಿಸುತ್ತೇನೆ. ಅವರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿತ್ತು. ಆವೇಶದಲ್ಲಿ ಅದನ್ನು ಮರೆತುಬಿಟ್ಟೆ ದಯಮಾಡಿ ಎಲ್ಲರೂ ಕ್ಷಮಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಹಿರಿಯರಾಗಿದ್ದ ಮುಕುಂದರವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಎನ್ನುವುದನ್ನು ನಾನು ಕೇಳಿದ್ದೇನೆ. ಅವರು ಒಬ್ಬ ಸಜ್ಜನ ರಾಜಕಾರಣಿಯಾಗಿದ್ದರು. ಅವರು ಸೌಜನ್ಯದ ವ್ಯಕ್ತಿಯಾಗಿದ್ದರು. ಬೇರೆ–ಬೇರೆ ಸಾಮಾಜಿಕ ಸಂಘಟನೆಗಳ ಜೊತೆಯಲ್ಲಿ ನಿಕಟವಾದ ಸಂಪರ್ಕ ಹೊಂದಿದವರಾಗಿದ್ದರು. 1957ರಲ್ಲಿ ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದರು. ಇಂತಹ ಹಿರಿಯ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಮಾನ್ಯ ವಿ.ಎಸ್.ಆಚಾರ್ಯರವರ ರೀತಿಯಲ್ಲಿ ಅವರು ಕೂಡ ಸಾಮಾಜಿಕ ವ್ಯವಸ್ಥೆಯಲ್ಲಿ ತಮ್ಮನ್ನು ತಾವು

ತೊಡಗಿಸಿಕೊಂಡವರಾಗಿದ್ದರು. ಇವರು ಒಳ್ಳೆಯ ರಾಜಕಾರಣಿಯಾಗಿದ್ದರು. ಇವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಆ ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಗಳೆ, ಆಚಾರ್ಯರವರ ಬಹಳ ದೊಡ್ಡಗುಣ. ಮೀಟಿಂಗ್ ಏಕೆ ಬರುತ್ತಿಲ್ಲ ನೀವು ಎಂದು ಕೇಳಿದಾಗ ಅವರು, ಇಲ್ಲಮ್ಮ ನೀವು ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದೀರಿ, ನಡೆಸಿಕೊಂಡು ಹೋಗಿ ಏನಾದರು ನಿಮಗೆ ಹೇಳಬೇಕು ಅನ್ನಿಸಿದಾಗ ನಾನು ನಿಮಗೆ ಸಲಹೆಗಳನ್ನು ಕೊಡುತ್ತೇನೆ. ಆದರೆ ಈಗ ಅದರ ಅಗತ್ಯ ಕಾಣುತ್ತಿಲ್ಲ ಎಂದು ಹೇಳಿದರು. ನಾನು ಮೂರು ವರ್ಷ ಉಡುಪಿ ಜಿಲ್ಲೆ ಉಸ್ತುವಾರಿ ಸಚಿವೆಯಾಗಿ ನಾನು ಕಾರ್ಯನಿರ್ವಹಿಸಿದೆ. ಒಂದು ಸಾರಿಯು ಕೂಡ ಅವರು ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲೆಗೆ ಬರುವುದಿಲ್ಲ. ಯಾವುದೇ ಕಾರ್ಯಕ್ರಮವನ್ನು ಸರಿಯಾಗಿ ನಡೆಸುತ್ತಿಲ್ಲ ಎಂದು ಒಂದು ಮಾತನ್ನು ಅವರು ಹೇಳಿದವರಲ್ಲ. ನಾನು ಜಿಲ್ಲೆ ಉಸ್ತುವಾರಿ ಸಚಿವೆಯಾದ ತಕ್ಷಣ ಅವರಲ್ಲಿ ಹೋಗಿ, ಸರ್ ನಾನು ಉಡುಪಿ ಜಿಲ್ಲೆ ಉಸ್ತುವಾರಿ ಸಚಿವೆಯಾಗಿ ಬಂದಿದ್ದೇನೆ ನನಗೆ ತಮ್ಮ ಆರ್ಶೀವಾದ ಬೇಕು ಎಂದು ಕೇಳಿದೆ. ಅದೇ ರೀತಿ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕಿಯಾಗಿ ಆಯ್ಕೆಯಾದಾಗಲು ನಾನು ಅವರನ್ನು ಪ್ರತ್ಯೇಕವಾಗಿ ಭೇಟಿಯಾಗಿ ತಮ್ಮ ಆಶೀರ್ವಾದ ನನಗೆ ಬೇಕು ಸರ್ ಇದರಲ್ಲಿ ನನಗೆ ಅನುಭವ ಕಡಿಮೆ ಏಕೆಂದರೆ ನಮ್ಮ ಹಿಂದಿನ ವಿರೋಧ ಪಕ್ಷದ ನಾಯಕರನ್ನು ಗಮನದಲ್ಲಿ ಇಟ್ಟುಕೊಂಡು ಗಂಡಸರ ರೀತಿಯಲ್ಲಿ ಪ್ರಭಾವಿಯಾಗಿ ವಿರೋಧ ಪಕ್ಷದ ನಾಯಕರಾಗಿ ಇಲ್ಲಿ ಮಾತನಾಡಲು ನನಗೆ ಆಗುತ್ತದಯೇ ಇಲ್ಲವೋ ಎಂದು ನಾನು ಅವರಿಗೆ ಹೇಳಿದೆ. ಅದಕ್ಕೆ ಅವರು ನನ್ನ ಆಶೀರ್ವಾದ ಇದ್ದೇ ತಾವೂ ವಿರೋಧ ಪಕ್ಷದ ನಾಯಕಿಯರಾಗಿದ್ದೀರಿ ಎಂದು ತಾವು ಭಾವಿಸಿಕೊಳ್ಳಬೇಕು, ನನ್ನ ಆಶೀರ್ವಾದ ತಮಗೆ ಸದಾ ಇರುತ್ತದೆ ಎಂದು ಹೇಳಿದರು. ನಿಜವಾಗಿಯು ಅವರ ಆಶೀರ್ವಾದದ ಋಣ ನನ್ನ ತಲೆ ಮೇಲೆ ಇದೆ ಎನ್ನುವುದನ್ನು ನಾನು ಮರೆಯುವುದಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ಅವರ ಮೇಲೆ

ಸೀರಿಯಸ್ ಆಗಿ ಕೆಲವೊಂದು ಮಾತುಗಳನ್ನು ಆಡುವಂತಹ ಸಂದರ್ಭ ಬಂತು. ಅವರು ಗೃಹ ಸಚಿವರಾಗಿದ್ದಾಗ ಪದ್ಮಪ್ರಿಯ ಪ್ರಕರಣ ಬಂತು. ಮೂರು ದಿನ ಎಲ್ಲಿ ಏನು ಆಗುತ್ತಿದೆ ಎನ್ನುವ ವಿಷಯವೆ ನಮಗೆ ಗೊತ್ತಾಗಲಿಲ್ಲ, ಏಕೆಂದರೆ ಪತ್ರಿಕೆಯಲ್ಲಿ ಒಂದು ರೀತಿ ಸುದ್ದಿ ಬರುತ್ತಿತ್ತು . ಆದರೆ ಕೊನೆಗೆ ಆಗಿದ್ದೇ ಬೇರೆ, ನಾನು ಸೀರಿಯಸ್ ಆಗಿ ತಾವು ಗೃಹ ಸಚಿವರಾಗಿ ಪದ್ಮಪ್ರಿಯ ವಾಪಸ್ ಬರುತ್ತಾರೆ ಎಂದು ಹೇಳಿಕೆ ಕೊಟ್ಟಿದ್ದೀರಿ ಅದು ಎಲ್ಲ ಮಾಧ್ಯಮಗಳಲ್ಲಿಯು ಬಂದಿದೆ. ಆದರೆ ಈಗ ಅವರ ಹತ್ಯೆ ಏಕೆ ಆಯಿತು? ಇದರಿಂದ ತಮ್ಮ ಮನಸ್ಸಿಗೆ ನೋವಾಗುತ್ತಿಲ್ಲವೆ? ಇಂತಹ ಒಂದು ಪ್ರಸಂಗ ನಿಮ್ಮ ಮಗಳ ಜೊತೆಯಲ್ಲಿಯೇ ಆಗಿದ್ದರೆ ನೀವು ಯಾವ ರೀತಿ ಇದನ್ನು ನಿಭಾಯಿಸುತ್ತಿದ್ದೀರಿ ಎಂದು ಕೇಳಿದೆ. ಅದಕ್ಕೆ ಅವರು ಮಗಳ ತರಹವೇನು ಅವರು ನನ್ನ ಜೊತೆ ಸ್ವಂತ ಮಗಳ ರೀತಿಯಲ್ಲಿಯೇ ನಡೆದುಕೊಳ್ಳುತ್ತಿದ್ದರು, ನನಗೂ ಕೂಡ ನೋವಾಗಿದೆ ಎಂದು ಹೇಳಿದರು. ಅದೇ ರೀತಿ ಮಡೆ ಸ್ನಾನದ ವಿಚಾರ ಬಂದಾಗ ಅವರಿಗೆ ನಾನು ಬಹಳ ಮಾತನಾಡಿದೆ. ತಾವು ಮುಜರಾಯಿ ಸಚಿವರಾಗಿ, ಒಬ್ಬ ಡಾಕ್ಟರ್ ಆಗಿ ಈ ಮಡೆಸ್ನಾನವನ್ನು ನಿಷೇಧ ಮಾಡಬೇಕಾಗುತ್ತದೆ. ಇದರ ಬಗ್ಗೆ ತಾವು ವಿಚಾರ ಮಾಡಬೇಕು ಎಂದು ಹೇಳಿದೆ, ಆಚಾರ – ವಿಚಾರಗಳಲ್ಲಿ ನಮಗೆ ನಂಬಿಕೆ ಇರುವುದು ಬೇರೆ ಆದರೆ ಅನಿಷ್ಟ ವಿಚಾರಗಳಿಗೆ ಅವಕಾಶ ಕೊಡಬಾರದು. ಮೌಢಕ್ಕೆ ಅವಕಾಶ ಕೊಡಬಾರದು ಎಂದು ಅವರಿಗೆ ಹೇಳಿದಾಗ, ಅವರು ಒಂದು ಮಾತನ್ನು ಹೇಳಿದರು. ಇಲ್ಲ ಇಲ್ಲಿ ಮೌಢ, ಅನಿಷ್ಟ ಆಚಾರಗಳ ಪ್ರಶ್ನೆಯಲ್ಲ, ಅಲ್ಲಿ ಇದನ್ನು ನಡೆಸಿಕೊಂಡು ಬರುತ್ತಿರುವ ಜನರ ಮನೋವೈರಿಯನ್ನು, ನಂಬಿಕೆಯನ್ನು ಪ್ರಶ್ನೆ ಮಾಡಿದ ಹಾಗೆ ಆಗುತ್ತದೆ. ಇದನ್ನು ತಕ್ಷಣ ಮಾಡಲು ಆಗುವುದಿಲ್ಲ. ಆದರೆ ಅವರನ್ನು ಕನ್‌ವಿನ್ಸ್ ಮಾಡಿ ಬದಲಾವಣೆಯನ್ನು ತರಲು ಪ್ರಯತ್ನ ಮಾಡುತ್ತೇನೆ ಎಂದು ಹೇಳಿದರು, ಆದರೆ ಸ್ಪಷ್ಟವಾದ ಉತ್ತರವನ್ನು ಹೇಳಲಿಲ್ಲ. ವೈದ್ಯರಾಗಿ ತಾವು ಈ ರೀತಿ ಹೇಳುವುದು ಸರಿಯಲ್ಲ. ಹೀಗಾಗಿ ಸ್ಕೀನ್ ಘಟಕವನ್ನು ಬಂದ್ ಮಾಡಬೇಕೆ ಎಂ,ಬಿ,ಬಿ,ಎಸ್ ಪದವಿ ತೆಗೆದುಕೊಂಡು ಅರಬ್ಬಿ ಸಮುದ್ರಕ್ಕೆ ಎಸೆಯಬೇಕಾ

ಎಂದು ಅವರಿಗೆ ಹೇಳದೆ ನಂತರ ಅಂತಹ ದೊಡ್ಡವರಿಗೆ ಈ ರೀತಿ ಹೇಳಿರುವುದು ಸರಿಯೇ ತಪ್ಪೆ ಎಂದು ಮತ್ತೆ ನಾನೆ ಯೋಚನೆಮಾಡಿದೆ. ಏನು ಈ ಹೆಂಗಸು ಇಷ್ಟು ದೊಡ್ಡ ಮಾತನ್ನು ಆಡುತ್ತಾಳೆ ಎಂದು ಅವರು ಅಂದುಕೊಂಡರೂ ಏನೋ ಎಂದು ಅಂದುಕೊಂಡೆ ಆದರೆ ಈ ಸ್ಥಾನದಲ್ಲಿ ನಿಂತಾಗ ಆ ಮಾತುಗಳನ್ನು ನಾನು ಹೇಳಬೇಕಾಗುತ್ತದೆ. ಮೊನ್ನೆ ಸೆಂಟ್‌ಮೇರಿಸ್ ಐಲ್ಯಾಂಡ್ ಬಗ್ಗೆ ಚರ್ಚೆಯಾಯಿತು. ಅದು ಧಾರ್ಮಿಕ ಸ್ಥಾನ, ತಾವು ಒಬ್ಬರು ಭೀಷ್ಮಾಚಾರ್ಯರ ತರಹ ಬಿಜೆಪಿಯಲ್ಲಿ ಇದ್ದಿರಿ. ಶರಪಂಜರದಲ್ಲಿ ಮಲಗಿಕೊಂಡು ಊಟ ಮಾಡುತಿದ್ದೀರಿ, ಆಂತದ ನೋವಿನ ಘಟನೆ ನಡೆದಿದೆ ಎಂದಾಗ ತಾವು ಹೆಚ್ಚಿಗೆ ನೋವು ಪಟ್ಟುಕೊಂಡಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ ಸೇಂಟ್‌ಮೇರಿಸ್‌ನಲ್ಲಿ ಇಡೀ ರಾತ್ರಿ ನಡೆದಿರುವ ರೇವ ಪಾರ್ಟಿಯಲ್ಲಿ ಫಾರಿನ್ ಮಹಿಳೆಯನ್ನು ಅರೆಬೆತ್ತಲೆಯಾಗಿ ಡಾನ್ಸ್ ಮಾಡಲು ಬಿಟ್ಟಿರುವುದು ಸರಿಯೇ? ಅಲ್ಲಿ ಒಂದು ಗೈಡ್‌ಲೈನ್ಸ್ ಇಲ್ಲವೆ?

ನೀವೆ ಹೇಳುವರರಲ್ಲಿ ಎಷ್ಟೇ ಸರಿ ಇದ್ದರೂ ಕೂಡ ಅದು ಇದಲ್ಲ. ನಿಜವಾಗಿಯೂ ಟಿವಿಯಲ್ಲಿ ತೋರಿಸಿರುವಂಥದ್ದು ಅಲ್ಲಿ ನಡೆದಿಲ್ಲ ಅದು ಮಾಧ್ಯಮದವರು ಮಾಡಿರುವಂತಹ ಸೃಷ್ಟಿ ಎಂದು ಹೇಳಿದಾಗ ನಾನು ಇದು ನೀವು ಹೇಳುವುದು ಸತ್ಯವಾಗಿದ್ದರೆ ಅಥವಾ ಮಾಧ್ಯಮದವರ ಸೃಷ್ಟಿಯಾಗಿದ್ದರೆ ಆ ವಿಡಿಯೋ ಕ್ಯಾಸೆಟ್ ಅನ್ನು ಮುಂದಿನ ಅಧಿವೇಶನದಲ್ಲಿ ನಮಗೆ ತೋರಿಸಬೇಕು ಕುಳಿತುಕೊಂಡು ನೋಡುತ್ತೇವೆ ರೇವೂ ರೆಸಾರ್ಟ್ ಪಾರ್ಟಿ ಯಾವ ರೀತಿಯಾಗಿ ನಡೆಯಿತು ಎಂದು ಗೊತ್ತಾಗುತ್ತದೆಂದು ಸವಾಲು ಹಾಕಿದೆ. ಒಟ್ಟಿನಲ್ಲಿ ಅದನ್ನು ಅವರು ಒಂದು ರೀತಿಯಾಗಿ ತೆಗೆದುಕೊಂಡರು ಆಮೇಲೆ ಹಿಂದಿನ ಅಧಿವೇಶನ ನಡೆಯುವಂತಹ ಸಮಯದಲ್ಲಿ ಸದನಕ್ಕೆ ಸಭಾನಾಯಕರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಬರಬೇಕೆಂದು ಪಟ್ಟು ಹಿಡಿದಾಗ ಆವರು ಸದನಕ್ಕೆ ಬರುವಂತಹ ಸಮಯದಲ್ಲಿ ಮುಗ್ಗರಿಸಿ ಬಿದ್ದರಂತೆ. ಅಷ್ಟರಲ್ಲಿ ಬ್ಲೂಲ್ ಫಿಲಂ ಹಗರಣ ಬಂದು ಸದನದನ್ನು ಮುಂದೂಡಲಾಗಿತ್ತು. ಆ ಸಮಯದಲ್ಲಿ ಅವರು ಕುಳಿತುಕೊಳ್ಳುವಂತಹ

ಜಾಗದ ಬಳಿಯಲ್ಲಿ ಹೋಗಿ ಮಾತನಾಡಿ Sorry Sir ನೀವು ಬರುವಂತಹ ಸಮಯದಲ್ಲಿ ಮುಗ್ಗರಿಸಿ, ಬಿದ್ದರಂತೆ ಎಂದು ಹೇಳಿದಾಗ, ನೀವು ಅಷ್ಟು ಕೂಗಾಡಿದ್ರಿ ಎಂದು ಬೇಗ ಬೇಗ ಬರಬೇಕಾದರೆ ಸ್ವಲ್ಪ ಮುಗ್ಗರಿಸಿ ಬಿದ್ದೆ ಎಂದು ಹೇಳಿದರು. ಆಮೇಲೆ ಆ ಬ್ಲೂ ಫಿಲಂ ಪ್ರಕರಣದ ಬಗ್ಗೆಯೂ ಕೂಡ ನೋವಿನಲ್ಲಿ ಕೂಡ ಮಾತನಾಡಿದರು. ಇದೆಲ್ಲಾ ಆಗಬಾರದಿತ್ತು. ಅವರೆಲ್ಲಾ ಒಳ್ಳೆಯ ವ್ಯಕ್ತಿಗಳೇ ಆಗಿದ್ದಾರೆಂದು ಹೇಳಿದರು ಆದರೂ ಕೂಡ ಇಂಥವು ಎಲ್ಲಾ ನಡೆದು ಹೋಗುತ್ತದೆ ನೀವು ಆಡಳಿತ ಪಕ್ಷದಲ್ಲಿ ಇದ್ದಿದ್ದರೂ ಕೂಡ ತಡೆಗಟ್ಟುವುದಕ್ಕೆ ಸಾಧ್ಯವಿಲ್ಲ ಎನ್ನುವಂತಹ ಮಾತನ್ನು ಅವರು ನನ್ನ ಹತ್ತಿರ ಹೇಳಿಕೊಂಡರು. ನಾನು ಇಲ್ಲಿ ಜೋರಾಗಿ ಮಾತನಾಡಿದರೆ ನನ್ನನ್ನು ಕರೆಸಿ, ನೋಡಿಯಮ್ಮ ನೀವು ಆಡಳಿತ ಪಕ್ಷದಲ್ಲಿ ಇದ್ದರೂ ನನ್ನ ರೀತಿಯಲ್ಲಿಯೇ ಕೆಲಸವನ್ನು ಮಾಡುವುದು ನಾವು ವಿರೋಧ ಪಕ್ಷದಲ್ಲಿದ್ದಾಗ ಇವತ್ತು ನೀವು ಏನು ಮಾಡುತ್ತಿದ್ದೀರಿ ಅದನ್ನೇ ನಾವು ಮಾಡುತ್ತಿದ್ದೇವು. ಆದರೆ ಕಾನೂನು ಈ ರೀತಿಯಾಗಿ ಹೇಳುವುದರಿಂದ ಅದನ್ನು ಮಾಡುವುದಕ್ಕೆ ಬರುವುದಿಲ್ಲವೆಂದು, ಎಲ್ಲವನ್ನೂ ನಮಗೆ ಇಷ್ಟ ಬಂದಂತೆ ಮಾಡುವುದಕ್ಕಾಗುವುದಿಲ್ಲ. ನೀವು ಇದನ್ನು ಅರ್ಥ ಮಾಡಿಕೊಳ್ಳಬೇಕು. ಆದರೆ ನೀವು ವಿರೋಧ ಪಕ್ಷದಲ್ಲಿದ್ದು ಮಾತನಾಡುವುದು ಸರಿ ಎಂದು ಹೇಳುತ್ತಿದ್ದರು. ವಿಧಾನ ಮಂಡಲ ನೌಕರರು ನಮ್ಮ ವೀರಣ್ಣ ಮತ್ತಿಕಟ್ಟಿಯವರಿಗೆ ಸನ್ಮಾನ ಸಮಾರಂಭ ಮಾಡಿದರು ಅದರಲ್ಲಿ ನಾನು ಅವರು ಸೇರಿದಾಗ ಓಪನ್ ಆಗಿ ಹೇಳಿದರು. ಅದೇನು Secret ಅಲ್ಲ. ನಾವು ಮಾತನಾಡಿದ್ದು ಎಲ್ಲಾ One to, one. ಅದಕ್ಕೆ ಅವರು ಏನು ಹೇಳಿದರು ಎಂದರೆ, ನೋಡಿ ಅಳುವ ಒಳ್ಳೆಯ ವೈಖರಿ ಅಥವಾ ಒಂದು ಅನುಭವ ಇರುವುದು ಕಾಂಗ್ರೆಸ್ ಪಕ್ಷದವರಿಗೆ, ವಿರೋಧ ಪಕ್ಷದಲ್ಲಿದ್ದು ಕೆಲಸ ಮಾಡುವುದು ನಮಗೆ ಸರಿ. ನಾವು ಸಮರ್ಥವಾಗಿ ವಿರೋಧ ಪಕ್ಷವಾಗಿ ಕೆಲಸ ಮಾಡುವುದಕ್ಕೆ ನಾವೇ ಸರಿ ಎನ್ನುವುದನ್ನು ಓಪನ್ ಆಗಿ ಅವರು ಒಪ್ಪಿಕೊಂಡರು. ಆಗ ನಾನು ಮತ್ತೆ ಅವರಿಗೆ ಇಲ್ಲ ಸಾರ್ ನೀವು ಸತ್ಯವನ್ನು ಹೇಳಿದ್ದೀರಿ. ನಿಜವಾಗಿಯೂ ನಾವು ಆಳುವುದರಲ್ಲಿ ಸ್ವಲ್ಪ ಎತ್ತಿದ ಕೈಯ ಎನ್ನುವ ರೀತಿಯಲ್ಲಿ ಹೇಳಿದೆ. ಏನೇ ಆಗಲಿ ಅವರಿಗೆ ಆ ಒಂದು ದೊಡ್ಡತನ

ಇತ್ತು. ಮತ್ತೆ ಕಳೆದ ಸಾರಿ ಬಜೆಟ್ ಮಂಡನೆ ಮಾಡಿದಂತಹ ಸಂದರ್ಭದಲ್ಲಿ ನಾನು ಮೊದಲು ಬಜೆಟ್ ಬಗ್ಗೆ ಮಾತನಾಡುವಂತಹ ಸಮಯದಲ್ಲಿ ಈ ಬಜೆಟ್‌ನಲ್ಲಿ ಬರೀ ಬೊಗಳೆ ಬಿಟ್ಟು ಬಿಟ್ಟಿದ್ದಾರೆ ಎಂದು ಹೇಳಿದೆ. ಅಂದರೆ ನಮ್ಮ ಕಡೆ ಭಾಷೆಯಲ್ಲಿ ಬೊಗಳೆ ಎಂದು ಸುಳ್ಳು ಹೇಳುವುದೆಂದು. ಅದನ್ನು ಪತ್ರಿಕೆಯವರು ಶ್ರೀಮತಿ ಮೋಟಮ್ಮನವರು ಬಜೆಟ್‌ನಲ್ಲಿ ಬೊಗಳೆ ಬಿಟ್ಟು ಬಿಟ್ಟಿದ್ದಾರೆ ಎಂದು ವರದಿ ಮಾಡಿದ್ದನ್ನು ಡಾ: ವಿ.ಎಸ್. ಆಚಾರ್ಯರವರ ಹೆಂಡತಿಯವರು ಓದಿ. ಡಾ: ವಿ.ಎಸ್.ಆಚಾರ್ಯಯವರಿಗೆ ಏನ್ರೀ ಮೋಟಮ್ಮನವರು ಬಹಳ ಒಳ್ಳೆಯ ಹೆಂಗಸರು ಎಂದು ಹೇಳುತ್ತಿದ್ದೀರಿ. ಆದರೆ ಅವರು ಏನು ಬಜೆಟ್ ಬಗ್ಗೆ ಬೊಗಳೋದು ಎಂದು ಹೇಳಿದ್ದಾರೆ. ಅದೇನು ಆ ರೀತಿಯಾಗಿ ಹೇಳಬಹುದೇ ಎಂದು ಕೇಳಿದರಂತೆ. ನನ್ನ ಹೆಂಡತಿಗೆ ತುಂಬಾ ಬೇಜಾರು ಆಯಿತು. ನೀವು ಬೊಗಳು ಎಂದು ಹೇಳಿದ್ದೀರಲ್ಲಾ ಎಂದರು. ಸಾರ್ ನಾನು ಬೊಗಳು ಎಂದು ಹೇಳಿಲ್ಲ. ಬೊಗಳೆ ಎಂದು ಹೇಳಿರುವಂಥದ್ದು. ನಮ್ಮ ಕಡೆ ಸುಳ್ಳು ಹೇಳುತ್ತಿದ್ದರೆ ನೋಡು ಬೊಗಳೆ ಬಿಡುತ್ತಿದ್ದಾನೆ ಎಂದು ಹೇಳುತ್ತೇವೆ. ಈ ಕಡೆ ಬುರುಡೆ ಬಿಡುತ್ತಿದ್ದಾನೆಂದು ಹೇಳುತ್ತಾರೆ. ಈ ರೀತಿಯಾಗಿ ಎಂದು  ಮನೆಯವರಿಗೆ ಹೇಳಿ ಎಂದು ಹೇಳಿದೆ. ಆಗ ಹಾಗೋ ಎಂದು ಹೇಳಿದರು. ತುಂಬ ಒಳ್ಳೆಯ ಮನುಷ್ಯರು. ಅಂಥವರ ಮಾರ್ಗದರ್ಶನ ಆಡಳಿತ ಪಕ್ಷದವರಿಗೆ ಮತ್ತು ವಿರೋಧ ಪಕ್ಷದವರಿಗೂ ಬೇಕು. ಅವರು ಒಂದು ತಾಳ್ಮೆ, ಸ್ನೇಹಮತ. ನಡವಳಿಕೆ ಮತ್ತು ಅವರು ಪಕ್ಷಕ್ಕೆ ಒಂದು ರೀತಿಯಲ್ಲಿ total advisor ಎಂದೇ ಹೇಳಬೇಕು. ಯಾವುದೇ ಸಮಸ್ಯೆ ಬಂದರೂ, ಯಾವುದೇ ಇಲಾಖೆಯ ಸಮಸ್ಯೆ ಬಂದಾಗ advisor  ಕೆಲಸವನ್ನು ಮಾಡಿದ್ದಾರೆ. ಅವರು ಗೃಹ ಸಚಿವರಾಗಿ, ಶಿಕ್ಷಣ ಸಚಿವರಾಗಿ ಹಾಗೆಯೇ ಆರೋಗ್ಯ ಸಚಿವರಾಗಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅವರ ಒಂದು ಅನುಭವವನ್ನು ಆ ಪಕ್ಷದವರು ಸರಿಯಾಗಿ ಉಪಯೋಗಿಸಿಕೊಂಡಿದ್ದೇ ಆಗಿದ್ದರೆ ಇವತ್ತು ಇಂತಹ ಒಂದು ದುರ್ಘಟನೆಗಳು, ದುರಂತಗಳು ನಡೆಯುತ್ತಿರಲಿಲ್ಲ . ಅವರ ಮನಸ್ಸಿಗೂ ಕೂಡ ನಿಜವಾಗಿಯೂ ನೋವಾಗಿತ್ತು.  ಹಾಗಾಗಿ ಇವತ್ತು ಅಂತಹ ಒಬ್ಬ ಧೀಮಂತ

ರಾಜಕಾರಣಿ ಇಲ್ಲದಂತಾಗಿದ್ದಾರೆ ಎಂದರೆ ನಮಗೆ ನೋವಾಗುತ್ತದೆ. ಆ ದಿನ ಸಂತಾಪ ಸೂಚಕದ ದಿನ ಮಾಧ್ಯಮದವರ ಮುಂದೆ ಮಾತನಾಡುವಾಗಲೂ ಕೂಡ ಕಣ್ಣಿನಲ್ಲಿ ನೀರು ಬಂತು. ಎಂತಹ ದೊಡ್ಡ ವ್ಯಕ್ತಿತ್ವ, ಅಂತಹ ರಾಜಕಾರಣಿಗಳು ಶ್ರೀ ಕೆ. ಹೆಚ್. ರಂಗನಾಥ್‌ರವರಾಗಲಿ, ಡಾ: ವಿ.ಎಸ್. ಆಚಾರ್ಯರವರಾಗಲಿ ಇಂಥವರು ಶುದ್ಧಹಸ್ತ. ಅಷ್ಟೇ ನಿಷ್ಕಳಂಕ ಭಾವನೆ ರಾಜಕಾರಣ ಎಂದರೆ ಯಾವ ರೀತಿಯಾಗಿ ಬೇಕಾದರೂ, ಯರ್‍ರಾ ಬಿರ್‍ರಿಯಾಗಿ ಫೋನ್ ತೆಗೆದುಕೊಂಡು ನಾನು ದೊಡ್ಡ ಲೀಡರ್ ಎಂದು ಪೋಸ್ ಕೊಡುವಂತಹ ವ್ಯಕ್ತಿತ್ವ ಅವರುಗಳದ್ದಲ್ಲ. ಅವರಿಗೆ ಕೊಟ್ಟ ಜವಾಬ್ದಾರಿಗಳನ್ನು ನೀಟಾಗಿ ಮಾಡಿಕೊಂಡು ಮತ್ತೆ ಸರ್ಕಾರ ಯಾವ ರೀತಿಯಾಗಿ ನಡೆಯಬೇಕೆಂದು ಆದರ್ಶವನ್ನು ಹೇಳಿಕೊಂಡು ಬಂದಂತಹ ವ್ಯಕ್ತಿಗಳು, ರಾಜಕಾರಣ ಯಾವ ಪಕ್ಷಕ್ಕೆ ಎಂದಲ್ಲ. ಇವತ್ತು ರಾಜಕಾರಣದಲ್ಲಿ ಒಂದು ರೀತಿಯ ಶೂನ್ಯ ಪರಿಸ್ಥಿತಿ ಬಂದಿದೆ. ಮಾಧ್ಯಮದವರು ಡಾ:ವಿ.ಎಸ್. ಆಚಾರ್ಯರವರು ನಿಧನದ ಬಗ್ಗೆ ಕೇಳಿದಾಗ ನಿಜವಾಗಿಯೂ ಕಣ್ಣೀರು ಬಂತು. ಇವತ್ತು ಕೂಡ ಆ ರೀತಿಯ ಒಂದು feeling ನನಗೆ ಇದೆ, ಅವರ ಒಂದು ನಡವಳಿಕೆಯನ್ನು ನಾವು ಆದರ್ಶವಾಗಿ ಇಟ್ಟುಕೊಳ್ಳೋಣ. ಅವತ್ತಿನ ದಿನ ಮಾನ್ಯ ಮುಖ್ಯಮಂತ್ರಿಗಳು ಕೂಡ ಕಣ್ಣೀರನ್ನು ಇಟ್ಟರು. ನನ್ನ budget preparation ಗೆ ಗೈಡ್ ಮಾಡುತ್ತಾರೆಂದು ಕೊಂಡಿದೆ. ಆದರೆ budget preparation ಗೆ guidance ಇಲ್ಲದಂತಾಯಿತು. ನಾನು ಏಕಾಂಗಿ ಎನ್ನುವ ರೀತಿಯಲ್ಲಿ ಅವರ ಭಾವನೆಯನ್ನು ವ್ಯಕ್ತಪಡಿಸಿದರು. ಅದು ನಿಜ. ಇವತ್ತಿನ ಪರಿಸ್ಥಿತಿ ನೋಡಿದರೆ ಮಾನ್ಯ ಮುಖ್ಯಮಂತ್ರಿಗಳು ಏಕಾಂಗಿಯೇ ಎಂದು ನನಗನ್ನಿಸುತ್ತದೆ. ಅವರು ಬದುಕಿದ್ದಿದ್ದರೆ ಒಂದು ಆನೆ ಬಲ ಇದ್ದ ಹಾಗೆ ಇರುತ್ತಿತ್ತು ಎಂದು ನನಗನ್ನಿಸುತ್ತದೆ. ಏಕೆಂದರೆ ಹಿರಿಯರೊಬ್ಬರು ನಮ್ಮ ಹಿಂದೆ ಇದ್ದಾರೆಂದರೆ ಸರಿ ತಪ್ಪುಗಳನ್ನು ತಿದ್ದುವಂಥದ್ದು ಮತ್ತು ಇಲ್ಲ ನೀನು ಏನು ಆ ರೀತಿಯಾಗಿ ಅಂದುಕೊಳ್ಳಬೇಡ ನೀನು ಮಾಡುತ್ತಿರುವಂಥದ್ದು ಸರಿ ಇದೆ. ಮುಂದೆ ಹೋಗು. ಇದನ್ನು ಸೀರಿಯಸ್ ಆಗಿ ತೆಗೆದುಕೊಳ್ಳಬೇಡ ಎಂದು ಹೇಳುತ್ತಿದ್ದರು. ಅದೇ ನಮಗೆ ಎಷ್ಟೋ ಸಮಾಧಾನವಾಗುತ್ತದೆ. ಹಾಗೆಯೇ

ಅವರು ಒಬ್ಬ ಮಾರ್ಗದರ್ಶಕರಾಗಿದ್ದರು. ಅಂತಹ ಒಬ್ಬ ವ್ಯಕ್ತಿ ಇನ್ನಿಲ್ಲವೆಂದು ಹೇಳಿದರೆ, ನಮಗೆಲ್ಲಾ ನೋವು ಮತ್ತು ಸಂಕಟವಾಗುತ್ತದೆ. ಅವರ ಆದರ್ಶಗಳನ್ನು ಮುಂದಿನ ರಾಜಕಾರಣಿಗಳಾದ ನಾವುಗಳು ಪಾಲನೆ ಮಾಡುವುದರ ಮೂಲಕ ಅವರಿಗೆ ಗೌರವವನ್ನು ಕೊಡಬೇಕಾಗುತ್ತದೆ. ಹಾಗೆಯೇ ಅವರ ಹೆಸರನ್ನು ಉಳಿಸುವಂತಹ ಕೆಲಸವನ್ನು ಮಾಡಬೇಕಾ ಗುತ್ತದೆ. ಉಳಿದ ಎಲ್ಲಾ ವಿಷಯಗಳನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈಗ ತಲೆಯ ಮೇಲೆ ಮಲವನ್ನು ಹೊರುವಂತಹ ಪದ್ಧತಿಯನ್ನು ನಿಷೇಧ ಮಾಡುವಂತಹ ಕಾನೂನು ಜಾರಿಗೆ ಬಂದಾಗ ಅವರು sincere ಆಗಿ ಉಡುಪಿ ಪಟ್ಟಣ ಟೌನ್ ಪಂಚಾಯಿತಿಯಲ್ಲಿ ಮೊದಲು ಅದನ್ನು ಜಾರಿ ತೆಗೆದುಕೊಂಡು ಬಂದರು ಎಂದರೆ ಅವರಿಗೆ ನಾವು hats off ಹೇಳಲೇಬೇಕು. ಇನ್ನು ಎಷ್ಟೋ ಪಟ್ಟಣ ಪಂಚಾಯಿತಿ ಅಥವಾ ನಗರ ಸಭೆಗಳು ಅಷ್ಟು ಚೆನ್ನಾಗಿ ಜಾರಿಗೆ ತೆಗೆದುಕೊಂಡು ಬರಲಿಲ್ಲ. ಆದರೂ ಅಂತಹ ಸಂದರ್ಭದಲ್ಲಿಯೂ ಸಹಾ ಇವರು ಬಹಳ ಚೆನ್ನಾಗಿ ಜಾರಿಗೆ ತೆಗೆದುಕೊಂಡು ಬಂದಿದ್ದರು. ಆದರೂ ಮೊನ್ನೆ ದಿವಸ ಒಬ್ಬ ವ್ಯಕ್ತಿ man hole ಗೆ ಬಿದ್ದು ಸತ್ತಿದ್ದನ್ನು ಕಂಡಿದ್ದೇವೆ. ಅದು ಪಟ್ಟಣದ ವ್ಯಾಪ್ತಿಗೆ ಬರದಿದ್ದರು ಈ ಘಟನೆ ರೂರಲ್ ಕಡೆಯಲ್ಲಿ ಆಗಿದೆ ಆದರೆ ಮನಸ್ಸು ಬೇಕಲ್ಲವೇ? ನಾವು ಒಂದು ಸ್ಥಾನದಲ್ಲಿದ್ದಾಗ ಯಾವುದೇ ಒಂದು ತತ್ವ ಸಿದ್ದಾಂತದ ಅಡಿಯಲ್ಲಿ ಕೆಲಸ ಮಾಡುತ್ತೇವೆ ಎನ್ನುವುದನ್ನು ನಮ್ಮ ಕಾರ್ಯ ವೈಖರಿಯಲ್ಲಿ ನಾವು ತೋರಿಸಿಕೊಡಬೇಕಾಗುತ್ತದೆ. ಅದು ಕೇವಲ ಹೀಗೆ ಮಾಡಬೇಕು ಎನ್ನುವಂತಹ ರೀತಿಯಲ್ಲಿ ಮಾಡಬಾರದು. ನಮ್ಮ ಒಂದು ಸ್ಥಾನಮಾನಕ್ಕೆ ಅದು ಚ್ಯುತಿಬಾರದ ಹಾಗೆ conscious ಆಗಿ. ಮಾಡುವುದು ಇದೆಯಲ್ಲಾ ಅದನ್ನು ನಾವು ಅವರಲ್ಲಿ ಕಂಡು ಕೊಂಡಿದ್ದೇವೆ. ಅವರ ಒಂದು ಕುಟುಂಬಕ್ಕೆ ಕಳೆದುಕೊಂಡಿರುವಂತಹ ಶಕ್ತಿಯನ್ನು ಭರಿಸುವಂತಹ ಶಕ್ತಿಯನ್ನು ನೀಡಲಿ, ಅವರ ಆತ್ಮಕ್ಕೆ ಶಾಂತಿಯನ್ನು ತರುವ ಕೆಲಸವನ್ನು ನಾವು ನೀವು ಎಲ್ಲಾ ಮಾಡೋಣ. ಇದು realize ಆದರೆ ಇವತ್ತು ಸಂತಾಪ ಸೂಚಕ ಸಭೆಯಲ್ಲಿ ಏನು ಹೊರಗಡೆ ಹೋಗಿ ಅತಂತ್ರ ವ್ಯವಸ್ಥೆಯನ್ನು ತಂದಿದ್ದಾರೆ ಅವರೂ ಕೂಡ realize ಮಾಡಿಕೊಳ್ಳುತ್ತಾರೆಂದು

ನಾನು ಭಾವಿಸಿ, ಮತ್ತೊಮ್ಮೆ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಅವರ ಆರ್ಶೀವಾದ ನಮ್ಮೆಲ್ಲರಿಗೂ ಇರಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಹಾಗೆಯೇ ಶ್ರೀ ಎಂ. ಮುಕುಂದರವರು ನಾನು ರಾಜಕಾರಣಕ್ಕೆ ಬರುವ ಮೊದಲೇ ಸೀನಿಯರ್ ರಾಜಕಾರಣಿಯಾಗಿ ಬಂದಿದ್ದಾರೆ. ಅವರ ಒಂದು ಮುಖ ಪರಿಚಯ ನನಗೆ ಇಲ್ಲ. ಇವತ್ತು ಏನು ನೀವು literature ಒದಗಿಸಿದ್ದೀರಿ ಅದರಲ್ಲಿ ಅವರು 1957ನೇ ಇಸವಿಯಲ್ಲಿ ವಿಧಾನಸಭೆಯ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದರು ಎಂದು ಹೇಳಿದ್ದೀರಿ. ನಾನು ಹುಟ್ಟಿರುವುದೇ 1951–52ನೇ ಇಸವಿಯಲ್ಲಿ ಎಂದು ಹೇಳುತ್ತಾರೆ. ಹಾಗಾಗಿ ನಾನು ಅವರನ್ನು ನೋಡಿಯೇ ಇರಲಿಲ್ಲ. ಅವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರಿಂದ ಅವರ ಬಗ್ಗೆ ಹೆಚ್ಚಿನ ಗೌರವ ಇದೆ. ಹಿಂದಿನವರ ಎಲ್ಲಾ ರಾಜಕೀಯ ನಡವಳಿಕೆ ಮಾದರಿಯಾಗಬೇಕಾಗುತ್ತದೆ, ಆದರ್ಶ ವಾಗಬೇಕಾಗುತ್ತದೆ. ಅಂಥವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಅವರಿಗೆ ಸದ್ಗತಿ ದೊರೆಯಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ ನಮಸ್ಕಾರ.

**ಸಭಾಪತಿಯವರು:–** ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ ಅವರ ಅಗಲಿಕೆಯ ನೋವುವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಸಭಾಪತಿಯವರು:–** ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

**ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವುದು.**

**(ಸದನವು ಮಧ್ಯಾಹ್ನ 1 ಗಂಟೆ 11 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 21ನೇ ಮಾರ್ಚ 2012 ರ ಬುಧವಾರ ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು.)**